ಸಂಪುಟ : 11 ಸಂಚಿಕೆ: 61 ಪುಟ : 4+2 ಬೆಲೆ: 3.00 ರವಿವಾರ ಎಪ್ರಿಲ್ 05 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ




Volume : 11 Issue : 61 Pages : 4+2 Price : 3.00 Sunday April 05 2026 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಇಂದು ಶ್ರೀಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನದ 39ನೇ ವಾರ್ಷಿಕೋತ್ಸವ



**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮಸಾರಿ, ವಿನಾಯಕ ನಗರ, ಜೆ.ಟಿ.ಕಾಲೇಜ್ ಬಳಿಯ ಶ್ರೀಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನದ 39ನೇ ವಾರ್ಷಿಕೋತ್ಸವ ಸಮಾರಂಭ ಎಪ್ರಿಲ್ 5 ರಂದು ಭಾನುವಾರ ನಡೆಯಲಿದೆ.

ಮುಂಜಾನೆ 7 ಗಂಟೆಗೆ ಶ್ರೀಗಣಪತಿ ದೇವರಿಗೆ ಫಲ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ಪೂಜೆ, ಮುಂಜಾನೆ 9 ಗಂಟೆಗೆ ಪುಣ್ಯಾಹವಾಚನ, ಮಹಾಗಣಪತಿ ಹೋಮ, ಕಲಾತತ್ವ ಹೋಮ, ಪಂಚವಿಶತಿ ಕಲಶಾಭಿಷೇಕ, ಗಣಹೋಮ, ನವಗ್ರಹ ಶಾಂತಿ, ಸುಬ್ರಹ್ಮಣ್ಯ ಹೋಮ ಹಮ್ಮಿಕೊಳ್ಳಲಾಗಿದೆ.

ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ ನಂತರ, ಪ್ರಸಾದ ವಿತರಣೆ (ಅನ್ನ ಸಂತರ್ಪಣೆ), ರಾತ್ರಿ 9ಕ್ಕೆ ಶ್ರೀರಂಗ ಪೂಜಾ ಅಷ್ಟಾವಧಾನ ಸೇವೆ ಜರುಗಲಿದೆ. ಸದ್ಭಕ್ತರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತಮ್ಮ ತನು, ಮನ, ಧನಕನಕಾಧಿಗಳನ್ನು ಶ್ರೀಗಣಪತಿ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕು ಎಂದು, ಶ್ರೀಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನ ಟ್ರಸ್ಟ ಅಧ್ಯಕ್ಷರಾದ ಬಿ. ಪ್ರಸನ್ನಕುಮಾರ (9845608200), ಕಾ ಂರ್ಯ ದ ರ್ಶಿ ಗ ಳಾ ದ ಯೋಗೇಶವೋರಾ (9480630041), ಹಾಗೂ ಪದಾಧಿಕಾರಿಗಳು ವಿನಂತಿಸಿದ್ದಾರೆ.

### ರೈಲ್ವೆ ಮೇಲ್ಸೇತುವೆ-ಅಂಡರ್ ಪಾಸ್ ಕನಸು ನನಸು- 43.24 ಕೋಟಿ ಯೋಜನೆಗೆ ಟೆಂಡರ್ ಆಹ್ವಾನ

# ದಶಕಗಳ ಹೋರಾಟಕ್ಕೆ ಫಲ!




**■ ಸರ್ದಾರ್ ಯಮನೂರಪ್ಪ**

**■ ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಹಗರಿಬೊಮ್ಮನಹಳ್ಳಿ ಪಟ್ಟಣದ ಬಹುದಿನಗಳ ಬೇಡಿಕೆಯಾದ ರೈಲ್ವೆ ಮೇಲ್ಸೇತುವೆ ಹಾಗೂ ಅಂಡರ್ ಪಾಸ್ ನಿರ್ಮಾಣಕ್ಕೆ ಇದೀಗ ಗ್ರೀನ್ ಸಿಗ್ನಲ್ ದೊರೆತಿದ್ದು, ಭಾರತೀಯ ರೈಲ್ವೆ ಇಲಾಖೆ ಟೆಂಡರ್ ಆಹ್ವಾನಿಸಿದೆ.

ಪಟ್ಟಣದ ರಾಮನಗರ ಈಶ್ವರ ದೇವಸ್ಥಾನ ಬಳಿಯ ರೈಲ್ವೆ ಗೇಟ್ ನಂ. 37ರಲ್ಲಿ ಮೇಲ್ಸೇತುವೆ ಹಾಗೂ ನೇತಾಜಿ ರಸ್ತೆಯ ಎಸ್‌ಬಿಐ ಬ್ಯಾಂಕ್ ಸಮೀಪದ ಗೇಟ್ ನಂ. 38ರಲ್ಲಿ ಅಂಡರ್ ಪಾಸ್ ನಿರ್ಮಾಣ ಕಾಮಗಾರಿಗೆ 43.24 ಕೋಟಿ ಮಂಜೂರಾಗಿದೆ. ಈ ಕುರಿತು ಸಂಸದರಾದ ಈ. ತುಕಾರಾಂ ಮಾಹಿತಿ ನೀಡಿದ್ದಾರೆ.

**"ಎರಡು ವರ್ಷಗಳಲ್ಲಿ ಕಾಮಗಾರಿ ಪೂರ್ಣ" – ಸಂಸದ ಈ. ತುಕಾರಾಂ**



ವಿಜಯಸಾಕ್ಷಿ ಪತ್ರಿಕೆಗೆ ದೂರವಾಣಿ ಮೂಲಕ ಪ್ರತಿಕ್ರಿಯಿಸಿದ ಸಂಸದ ಈ. ತುಕಾರಾಂ ಅವರು, ಹಲವು ದಶಕಗಳಿಂದ ಸ್ಥಳೀಯರ ಬೇಡಿಕೆಯಾಗಿ ಉಳಿದಿದ್ದ ಮೇಲ್ಸೇತುವೆ ಹಾಗೂ ಅಂಡರ್ ಪಾಸ್ ನಿರ್ಮಾಣಕ್ಕೆ ಇದೀಗ ಸ್ಪಷ್ಟ ದಾರಿ ದೊರೆತಿದೆ ಎಂದು ತಿಳಿಸಿದ್ದಾರೆ.

ಪಾರ್ಲಿಮೆಂಟ್‌ನಲ್ಲಿ ಈ ವಿಷಯ ಚರ್ಚೆಗೆ ಬಂದ ಬಳಿಕ ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರು ಸಕಾರಾತ್ಮಕವಾಗಿ ಸ್ಪಂದಿಸಿ ಯೋಜನೆ ಜಾರಿಗೆ ಸಹಕರಿಸಿದ್ದಾರೆ ಎಂದು ಹೇಳಿದರು. ಈ ಕಾರ್ಯಕ್ಕೆ ನಂದಿಪುರದ ಮಹೇಶ್ವರ ಮಹಾಸ್ವಾಮಿಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಮಹತ್ವದಾಗಿದೆ ಎಂದು ತಿಳಿಸಿದ ಅವರು, ಸಾರ್ವಜನಿಕರಿಗೆ ನೀಡಿದ ಭರವಸೆಯಂತೆ ಎರಡು ವರ್ಷಗಳೊಳಗೆ ಈ ಬೃಹತ್ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

> ಸುಮಾರು 22 ವರ್ಷಗಳ ನಿರಂತರ ಹೋರಾಟದ ಫಲವಾಗಿ ಸ್ಥಳೀಯರ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆತಿದೆ. ಈ ಕಾರ್ಯಕ್ಕೆ ಸಹಕರಿಸಿದ ಜನಪ್ರತಿನಿಧಿಗಳು, ರೈಲ್ವೆ ಇಲಾಖೆ ಹಾಗೂ ಸಂಘಟನೆಗಳಿಗೆ ಅಭಿನಂದನೆಗಳು.
>
> **–ಮಹೇಶ್ವರ ಮಹಾಸ್ವಾಮಿಗಳು,** ನಂದಿಪುರ ಕ್ಷೇತ್ರ,

ಹಗರಿಬೊಮ್ಮನಹಳ್ಳಿ ಪಟ್ಟಣ ಹಾಗೂ ಸುತ್ತಮುತ್ತಲಿನ ಜನರು ಹಲವು ದಶಕಗಳಿಂದ ಈ ಯೋಜನೆಗಾಗಿ ಹೋರಾಟ ನಡೆಸುತ್ತಿದ್ದರು. ಹೊಸಪೇಟೆ-ಹರಿಹರ ರಾಜ್ಯ ಹೆದ್ದಾರಿಯಲ್ಲಿ ರೈಲ್ವೆ ಗೇಟ್‌ಗಳು ಬಂದಾಗ ಗಂಟೆಗಳ ಕಾಲ ವಾಹನ ಸವಾರರು, ವಿದ್ಯಾರ್ಥಿಗಳು, ರೈತರು ಮತ್ತು ಸಾರ್ವಜನಿಕರು ಕಾಯಬೇಕಾಗುತ್ತಿತ್ತು. ಇದರಿಂದ ದೈನಂದಿನ ಜೀವನದಲ್ಲಿ ತೀವ್ರ ತೊಂದರೆ ಉಂಟಾಗುತ್ತಿತ್ತು.

ಈ ಸಮಸ್ಯೆಯನ್ನು ಪರಿಹರಿಸಲು ರೈಲ್ವೆ ಹೋರಾಟ ಸಮಿತಿ, ನಂದಿಪುರದ ಮಹೇಶ್ವರ ಮಹಾಸ್ವಾಮಿಗಳು, ಹಾಲಶಂಕರ ಮಹಾಸ್ವಾಮಿಗಳು, ರೈತ ಸಂಘ, ಚೇಂಬರ್ ಆಫ್ ಕಾಮರ್ಸ್, ಕಮ್ಯುನಿಸ್ಟ್ ಪಾರ್ಟಿ, ವಕೀಲರ ಸಂಘ, ಜವಳಿ ವರ್ತಕರ ಸಂಘ, ಆಟೋ ಚಾಲಕರ ಸಂಘ ಸೇರಿದಂತೆ ಹಲವು ಸಂಘಟನೆಗಳು ಹಾಗೂ ಸಾರ್ವಜನಿಕರು ನಿರಂತರ ಹೋರಾಟ ನಡೆಸಿದ್ದರು. ಇದೀಗ ಆ ಹೋರಾಟಕ್ಕೆ ಫಲ ಸಿಕ್ಕಿದ್ದು, ಶಾಶ್ವತ ಪರಿಹಾರ ದೊರಕುವ ದಾರಿಗೆ ಯೋಜನೆ ▸▸ 4ನೇ ಪುಟಕ್ಕೆ

### ರಸ್ತೆ ಆಕ್ರಮಣ ಆರೋಪ- ದಲಿತ ಮಿತ್ರ ಮೇಳದಿಂದ ಜಿಲ್ಲಾಧಿಕಾರಿಗೆ ಮನವಿ

# ತೋಂಟದಾರ್ಯ ಮಠದ ಜಾತ್ರೆಗೆ ವಿರೋಧ



**■ ವಿಜಯಸಾಕ್ಷಿ ಸುದ್ದಿ, ಗದಗ**

ಶ್ರೀ ಜಗದ್ಗುರು ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವಕ್ಕೆ ಅನುಮತಿ ನೀಡಬಾರದೆಂದು ಆಗ್ರಹಿಸಿ ದಲಿತ ಮಿತ್ರ ಮೇಳದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಭಕ್ತರಿಗಾಗಿ ಮೀಸಲಾಗಿರುವ ಮಠವನ್ನು ವ್ಯಾಪಾರ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂಬ ಆರೋಪವನ್ನು ಸಂಘಟನೆ ಮಾಡಿದೆ. ಜಾತ್ರೆಯ ನೆಪದಲ್ಲಿ ಸರಕಾರಿ ರಸ್ತೆಯಲ್ಲೇ ಖಾಸಗಿ ಅಂಗಡಿಗಳು ಮತ್ತು ಮುಂಗಟ್ಟುಗಳಿಗೆ ಮಳಿಗೆ ಬಾಡಿಗೆ ನೀಡಲಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಸಂಘಟನೆಯ ಗೌರವ ಅಧ್ಯಕ್ಷ ಪಿ.ಎಸ್. ಕಾಳೆ ಮಾತನಾಡಿ, ಸರಕಾರಿ ರಸ್ತೆಯಲ್ಲಿ ಅಂಗಡಿಗಳನ್ನು ಸ್ಥಾಪಿಸುವ ಮೂಲಕ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಆದ್ದರಿಂದ ಇಂತಹ ಜಾತ್ರೆಗೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿದರು.

ಅಧ್ಯಕ್ಷ ಕುಮಾರ ನಡಗೇರಿ ಮಾತನಾಡಿ, ಪ್ರತಿವರ್ಷ ಎಪ್ರಿಲ್ ಮೊದಲ ವಾರದಿಂದ ಸುಮಾರು ಮೂರು ತಿಂಗಳುಗಳವರೆಗೆ ಜಾತ್ರೆ ನಡೆಯುತ್ತದೆ. ಈ ಅವಧಿಯಲ್ಲಿ ನಗರಸಭೆಯ ರಸ್ತೆಯನ್ನು ಅನಧಿಕೃತವಾಗಿ ಖಾಸಗಿ ಅಂಗಡಿಕಾರರಿಗೆ ಬಾಡಿಗೆ ನೀಡಲಾಗುತ್ತಿದೆ. ಇದರಿಂದ ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿದೆ ಎಂದು ಆರೋಪಿಸಿದರು.

> "ಸಾರ್ವಜನಿಕ ರಸ್ತೆಯನ್ನು ಖಾಸಗಿ ಬಳಕೆಗೆ ನೀಡುವುದು ತಪ್ಪು, ಜನರ ಸಂಚಾರಕ್ಕೆ ಅಡ್ಡಿಯಾಗುವ ಜಾತ್ರೆಗೆ ಅನುಮತಿ ನೀಡಬಾರದು."
>
> **– ದಲಿತ ಮಿತ್ರ ಮೇಳ ಮುಖಂಡರು.**

ಉಪಾಧ್ಯಕ್ಷ ವೆಂಕಟೇಶ ದೊಡ್ಡಮನಿ ಮಾತನಾಡಿ, ಜಾತ್ರೆಯ ಸಂದರ್ಭದಲ್ಲಿ ಕಳ್ಳತನ ಹಾಗೂ ಅಶಾಂತಿ ಘಟನೆಗಳು ಹೆಚ್ಚಾಗುತ್ತಿವೆ. ಕಳೆದ ವರ್ಷವೂ ರಸ್ತೆ ಮಧ್ಯದಲ್ಲೇ ಅಂಗಡಿಗಳು ಸ್ಥಾಪನೆಯಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾಗಿತ್ತು ಎಂದು ಹೇಳಿದರು.

ಮಠದ ಮುಂದಿನ ರಸ್ತೆಯಲ್ಲಿ ರಥೋತ್ಸವ ನಡೆಸುವುದಕ್ಕೆ ಯಾವುದೇ ವಿರೋಧವಿಲ್ಲ. ಆದರೆ ಅದೇ ರಸ್ತೆಯನ್ನು ಖಾಸಗಿ ಆಸ್ತಿಯಂತೆ ಬಳಸಿಕೊಂಡು ಬಾಡಿಗೆ ನೀಡುವುದು ತಪ್ಪಾಗಿದೆ ಎಂದು ಸಂಘಟನೆ ಸ್ಪಷ್ಟಪಡಿಸಿದೆ.

ಈ ಹಿನ್ನೆಲೆಯಲ್ಲಿ ಈ ವರ್ಷದ ಜಾತ್ರೆಗೆ ಅನುಮತಿ ನೀಡಬಾರದು ಎಂದು ಮನವಿ ಸಲ್ಲಿಸಲಾಗಿದೆ. ಒಂದು ವೇಳೆ ಅನುಮತಿ ನೀಡಿದರೆ ಗದಗ-ಬೆಟಗೇರಿ ಅವಳಿ ನಗರದ ವಿವಿಧ ಸಂಘಟನೆಗಳೊಂದಿಗೆ ಉಗ್ರ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ವೆಂಕಟೇಶ ದೊಡ್ಡಮನಿ, ಸತೀಶ ಕುಂಬಾರ, ರವಿ ಬಂಡಿವಡ್ಡರ, ಮಾಂತೇಶ ಹೊನ್ನಪ್ಪನವರ, ಶಿವು ಲದ್ದಿ, ದೇವರಾಜ ನವಲಿ ಸೇರಿದಂತೆ ಸಂಘಟನೆಯ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸೈನಿಕರನ್ನು ಗೌರವದಿಂದ ಕಾಣಬೇಕು



**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಸೊರಟೂರ ಗ್ರಾಮದ ಯೋಧ ಜಗದೀಶ ಮಳ್ಳಿ ಅವರು 22 ವರ್ಷಗಳ ಕಾಲ ದೇಶ ಸೇವೆ ಸಲ್ಲಿಸಿ ಸ್ವಗ್ರಾಮಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಮುಸ್ಲಿಂ ಸಮಾಜದ ವತಿಯಿಂದ ಜುಮ್ಮಾ ಮಸೀದಿಯಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಮಾತನಾಡಿದ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮೈಬುಸಾಬ ಯಕ್ಲಾಸಪೂರ, ಸೈನಿಕರು ದೇಶದ ರಕ್ಷಣೆಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟವರಾಗಿದ್ದಾರೆ. ಹಗಲು-ರಾತ್ರಿ ಎನ್ನದೇ ದೇಶ ಕಾಯುವ ಇಂತಹ ಯೋಧರನ್ನು ಸದಾ ಗೌರವದಿಂದ ಕಾಣಬೇಕು ಎಂದು ಹೇಳಿದರು.

ದೇಶದ ಭದ್ರತೆಗಾಗಿ ತಮ್ಮ ಪ್ರಾಣವನ್ನೇ ಲೆಕ್ಕಿಸದೆ ಸೇವೆ ಸಲ್ಲಿಸುವ ಸೈನಿಕರು ಸಮಾಜಕ್ಕೆ ಮಾದರಿಯಾಗಿದ್ದು, ಅವರ ಸೇವೆ ಅಪಾರವಾಗಿದೆ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಶಿರಾಜ್ ಯಳವತ್ತಿ, ಪಕ್ರುಸಾಬ ಬಾಬುಖಾನವರ, ಪೀರಸಾಬ ಹಣಗಿ, ಶರೀಫ್‌ಸಾಬ ಬಾಬುಖಾನವರ, ಮೈಬೂಬಸಾಬ ಶಿರಹಟ್ಟಿ, ದಾವಲಸಾಬ ಸಂಶಿ, ಎಂ.ಎ. ಯರಗುಡಿ, ಪೀರಸಾಬ ಡಂಬಳ, ಬಾಬುಸಾಬ ಖರ್ನಾಚಿ, ಮಾಬುಸಾಬ ಬಡಿಗೇರ ಸೇರಿದಂತೆ ಮುಸ್ಲಿಂ ಸಮಾಜದ ಬಂಧುಗಳು ಉಪಸ್ಥಿತರಿದ್ದರು.

### ಚಿಂಚಲಿ ಗ್ರಾಮದಲ್ಲಿ ನೈಸರ್ಗಿಕ ಸೋಪ್ ತಯಾರಿಕೆ ಕಾರ್ಯಾಗಾರ- ಮಹಿಳಾ ಸಬಲೀಕರಣಕ್ಕೆ ಹೆಜ್ಜೆ

# ಸ್ವ-ಉದ್ಯಮದತ್ತ ಗ್ರಾಮವನ್ನು ಮಾದರಿಯಾಗಿಸಿ



**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಗ್ರಾಮೀಣ ಮಹಿಳೆಯರ ಸ್ವ-ಉದ್ಯಮಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಮೀಪದ ಚಿಂಚಲಿ ಗ್ರಾಮದಲ್ಲಿ ನೈಸರ್ಗಿಕ ಸೋಪ್ ತಯಾರಿಕೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ರಾಜೇಶ್ವರಿ ಬಡ್ನಿ, ಮಹಿಳೆಯರು ತಮ್ಮ ಜೀವನದಲ್ಲಿ ಎದುರಿಸುವ ಕಷ್ಟಗಳನ್ನು ಮರೆತು ಸದಾ ದುಡಿಮೆಯಲ್ಲಿ ತೊಡಗಿರುವುದನ್ನು ಶ್ಲಾಘಿಸಿದರು. ಇಂತಹ ಕಾರ್ಯಾಗಾರಗಳ ಮೂಲಕ ಕಲಿತ ಕೌಶಲ್ಯವನ್ನು ಕೇವಲ ತರಬೇತಿಗೆ ಸೀಮಿತಗೊಳಿಸದೇ, ಮನೆಮಟ್ಟದಲ್ಲಿಯೇ ಸಣ್ಣ ಉದ್ಯಮವಾಗಿ ರೂಪಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು ಎಂದು ಹೇಳಿದರು.

> "ಕಾರ್ಯಾಗಾರದಲ್ಲಿ ಕಲಿತ ಕೌಶಲ್ಯವನ್ನು ಸ್ವ-ಉದ್ಯಮವಾಗಿ ರೂಪಿಸಿಕೊಂಡರೆ ಚಿಂಚಲಿ ಗ್ರಾಮ ಉದ್ಯಮದಾರಿಕೆಗೆ ಮಾದರಿಯಾಗುತ್ತದೆ."
>
> **– ರಾಜೇಶ್ವರಿ ಬಡ್ನಿ.**

ಮಹಿಳೆಯರು ತಾವು ತಯಾರಿಸುವ ಉತ್ಪನ್ನಗಳನ್ನು ಸ್ಥಳೀಯವಾಗಿ ಮಾರಾಟ ಮಾಡುವ ಮೂಲಕ ಸ್ವ-ಉದ್ಯಮ ಆರಂಭಿಸಿ, ಚಿಂಚಲಿ ▸▸ 4ನೇ ಪುಟಕ್ಕೆ

### ಗ್ರಾಮಸಭೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆಗೆ ಡಿ ಆರ್ ಪಾಟೀಲ ಕರೆ

# ಜನರ ಸಮಸ್ಯೆಗಳೇ ಬಜೆಟ್‌ಗೆ ಆಧಾರ

**■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಮುಂಬರುವ 2027-28ರ ರಾಜ್ಯ ಬಜೆಟ್ ಅನ್ನು ಜನಕೇಂದ್ರೀಕೃತ ಯೋಜನೆಯಾಗಿ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ತಿಳಿಸಿದ್ದಾರೆ.

ಶನಿವಾರ ಶಿರಹಟ್ಟಿಯ ತಾಲೂಕು ಪಂಚಾಯತ್ ಸ ಭಾ ಭ ವ ನ ದ ಲ್ಲಿ ಮಹಿಳೆಯರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಅಭಿವೃದ್ಧಿಗೆ ಜನರ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಂತ ಮುಖ್ಯ ಎಂದು ಹೇಳಿದರು.

ಕಾನೂನು ಹಾಗೂ ಸಂವಿಧಾನ ನೀಡಿರುವ ಅಧಿಕಾರಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿಲ್ಲ. ಹಲವು ವರ್ಷಗಳಾದರೂ ಅಧಿಕಾರಗಳ ಪೂರ್ಣ ಹಸ್ತಾಂತರವಾಗಿಲ್ಲ. ಜನರು ಸಹಕರಿಸಿದರೆ ಈ ಬದಲಾವಣೆ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮ ಪಂಚಾಯತ್ ಮತ್ತು ನಗರ ಪ್ರದೇಶಗಳಲ್ಲಿ ನಡೆಯುವ ಗ್ರಾಮಸಭೆ ಹಾಗೂ ನೆರೆಹೊರೆ ಗುಂಪುಗಳ ಸಭೆಗಳಲ್ಲಿ ಜನರು ಕಡ್ಡಾಯವಾಗಿ ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಆದ್ಯತೆಯಂತೆ ಗುರುತಿಸಬೇಕು.

ಸಮೂಹ ನಿರ್ಧಾರಗಳ ಆಧಾರದಲ್ಲಿ ಯೋಜನೆ ರೂಪಿಸಿದರೆ, ಅದು ಕಾನೂನು ಮತ್ತು ಹಣಕಾಸಿನ ಚೌಕಟ್ಟಿನಲ್ಲಿ ಜಾರಿಗೆ ಬರಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.



ಇದೇ ಸಂದರ್ಭದಲ್ಲಿ, ಪ್ರತಿ ಗ್ರಾಮದಲ್ಲಿನ ಕುಟುಂಬಗಳು ತಿಂಗಳಿಗೆ 100 ಸಂಗ್ರಹಿಸಿ ಬಡ ವಿದ್ಯಾರ್ಥಿಗಳ ಶಿಕ್ಷಣ-ಕ್ಕೆ ನೆರವಾಗುವ ಕಾರ್ಯಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

> "ಜನರ ಪಾಲ್ಗೊಳ್ಳುವಿಕೆಯಿಂದ ರೂಪುಗೊಳ್ಳುವ ಯೋಜನೆಗಳೇ ಪರಿಣಾಮಕಾರಿಯಾಗಿ ಜಾರಿಗೆ ಬರುತ್ತವೆ."
>
> **– ಡಿ.ಆರ್. ಪಾಟೀಲ,** ಮಾಜಿ ಶಾಸಕ.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ, ನಂದಾ ಪಲ್ಲೇದ, ವೀರಯ್ಯ ಮಠಪತಿ, ಜೆ.ಕೆ. ಜಮಾದಾರ, ಗುರಣ್ಣ ಬಳಗಾನೂರ, ಸಿ.ಕೆ. ಮುಳಗುಂದ, ಅಜ್ಜು ಪಾಟೀಲ, ರಾಮಣ್ಣ ಶೆಲಿಯಪ್ಪನವರ, ಎಚ್.ಎ. ಕೊಂಡಿಕೊಪ್ಪ, ಸಿಡಿಪಿಓ ಮೃತ್ಯುಂಜಯ ಗುಡ್ಡದಾನ್ವೇರಿ ಹಾಗೂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ ಉಪಸ್ಥಿತರಿದ್ದರು.

# ಕಾರ್ಮಿಕ ಮುಖಂಡ ಎ.ಜೆ. ಮುಧೋಳ ಅವರ 25ನೇ ವರ್ಷದ ಸ್ಮರಣೆ



■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹಿರಿಯ ಕಮ್ಯೂನಿಸ್ಟ್ ನಾಯಕ ಹಾಗೂ ಕಾರ್ಮಿಕ ಮುಖಂಡ ಎ.ಜೆ. ಮುಧೋಳ ಅವರ 25ನೇ ವರ್ಷದ ಸ್ಮರಣೆ ಕಾರ್ಯಕ್ರಮವು ಹುಬ್ಬಳ್ಳಿಯ ಮುಧೋಳ ಭವನದಲ್ಲಿ ಭಾವಪೂರ್ಣವಾಗಿ ಜರುಗಿತು. ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಹಲವಾರು ಮುಖಂಡರು ಅವರ ಜೀವನ ಸಾಧನೆಗಳನ್ನು ಸ್ಮರಿಸಿದರು.

ಅಸಂಖ್ಯಾತ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಹಿತಕ್ಕಾಗಿ ಐದು ದಶಕಗಳ ಕಾಲ ನಿರಂತರ ಹೋರಾಟ ನಡೆಸಿದ ಮುಧೋಳ ಅವರು ಕಾರ್ಮಿಕ ವರ್ಗದ ಧ್ರುವತಾರೆಯಾಗಿ ಹೆಸರುವಾಸಿಯಾಗಿದ್ದರು. ಕಾರ್ಮಿಕರ ಕೂಲಿ ಹೆಚ್ಚಳ, ಸಾಮಾಜಿಕ ಭದ್ರತೆ, ಬೀಡಿ ಕಾರ್ಮಿಕರಿಗೆ ವಸತಿ ಯೋಜನೆ ಜಾರಿಗೆ ತರುವಂತಹ ಹಲವಾರು ಹೋರಾಟಗಳನ್ನು ಯಶಸ್ವಿಯಾಗಿ ಮುನ್ನಡೆಸಿದ್ದರು.

ಕರ್ನಾಟಕ ಏಕೀಕರಣ ಹೋರಾಟ, ಗೋವಾ ವಿಮೋಚನಾ ಹೋರಾಟ ಹಾಗೂ ನರಗುಂದ ರೈತ ಬಂಡಾಯಗಳಲ್ಲಿ ಅವರು ಮಹತ್ವದ ಪಾತ್ರವಹಿಸಿದ್ದರು. ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ವಿರೋಧವಾಗಿ ನಡೆಸಿದ "ನೈಯಾಪೈಸೆ ಹೋರಾಟ" ಜನಸಾಮಾನ್ಯರಲ್ಲಿ ಭಾರೀ ಪ್ರತಿಕ್ರಿಯೆ ಮೂಡಿಸಿತ್ತು. ಪ್ರಭಾವಿ ಭಾಷಣಕಾರರಾಗಿದ್ದ ಅವರ ಮಾತಿನ ಶಕ್ತಿ ಸಾಮಾಜಿಕ ಹೋರಾಟಗಳಿಗೆ ಹೊಸ ದಿಕ್ಕು ನೀಡಿತ್ತು.

ಮಹಾನಗರ ಪಾಲಿಕೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಅವರು ಸದಾ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು. ಇಂತಹ ಮಹಾನ್ ಹೋರಾಟಗಾರರ ಸ್ಮರಣಾರ್ಥ ಹುಬ್ಬಳ್ಳಿ ನಗರದಲ್ಲಿ ಅವರ ಪ್ರತಿಮೆಯನ್ನು ನಿರ್ಮಿಸಬೇಕು ಎಂಬ ಒತ್ತಾಯ ಕಾರ್ಯಕ್ರಮದಲ್ಲಿ ಕೇಳಿಬಂದಿತು.

ಕಾರ್ಯಕ್ರಮದಲ್ಲಿ ಪ್ರೊ. ಐ.ಜಿ. ಸನದಿ, ಬಿ.ಎಸ್. ಸೊಪ್ಪಿನ, ಸನತಕುಮಾರ ಬೆಳಗಲಿ, ಮಹೇಶ ಪತ್ತಾರ, ಮಹೇಂದ್ರ ಸಿಂಘ್ವಿ, ಮೋಹನ ಲಿಂಬಿಕಾಯಿ, ಚಂದ್ರಶೇಖರ ಅಳಗುಂಡಗಿ, ಬಸವರಾಜ ಸುಳೆಭಾವಿ, ಬಾಬಾಜಾನ್ ಮುಧೋಳ, ಬಸೀರ ಮುಧೋಳ, ಇಸೂಫ್ ಬಳ್ಳಾರಿ, ರಮೇಶ್ ಬೂಸ್ಲೆ, ನಜರ್ ಕೋಲ್ಕಾರ, ಮೌಲಾಸಾಬ ನದಾಫ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಗದಗ: ಇಲ್ಲಿನ ಕಳಸಾಪೂರ ರಸ್ತೆಯ ವಿಶ್ವೇಶ್ವರಯ್ಯ ನಗರದ ವಿಘ್ನೇಶ್ವರ ಸೇವಾ ಸಮಿತಿ ವತಿಯಿಂದ ಶ್ರೀ ಆಂಜನೇಯ ಸ್ವಾಮಿ ಜಯಂತ್ಯುತ್ಸವದ ಅಂಗವಾಗಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ, ವಿಶೇಷ ಅಲಂಕಾರ, ಮಹಾರುದ್ರಾಭಿಷೇಕ, ಬಾಲಮಾರುತಿ ತೊಟ್ಟಿಲೋತ್ಸವ ಕಾರ್ಯಕ್ರಮ ಏರ್ಪಡಿಸಿತ್ತು. ಭಕ್ತಾಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಸಂಕಷ್ಟ ಹರ - ಭಕ್ತವತ್ಸಲ - ವರಪ್ರದ ಶ್ರೀ ಕೈಲಾಸ ವರಸಿದ್ಧಿ ಗಣಪತಿ..

## (ಇಂದು 39ನೇ ವಾರ್ಷಿಕೋತ್ಸವ ನಿಮಿತ್ತ ಲೇಖನ)


**ವಂದಿಪೆ ನಿನಗೆ ಗಣನಾಥ**
**ಮೊದಲೊಂದಿಪೆ ನಿನಗೆ ಗಣನಾಥ**

ಬಂದ ವಿಘ್ನಗಳ ಕಳೆ ಗಣನಾಥ ಎಂಬ ಪುರಂದರದಾಸರ ಗಣಪತಿ ಶ್ಲೋಕದಂತೆ ಗದುಗಿನ ಮಸಾರಿ ಭಾಗದ 12ನೇ ವಾರ್ಡಿನಲ್ಲಿ ನೆಲೆಸಿರುವ ಶ್ರೀ ಕೈಲಾಸ ವರಸಿದ್ಧಿ ಗಣಪತಿಯು ನಂಜಿನಗುಡ್ಡದ ಉಚ್ಚಿಷ್ಟ ಗಣಪತಿಯಂತೆ ಕನ್ನಡನಾಡಿನ ಭಕ್ತವತ್ಸಲ, ಸಂಕಷ್ಟ ಹರ ಗಣಪತಿಯಾಗಿ ಭಕ್ತರಲ್ಲಿ ಕಾಣಿಸಿಕೊಂಡಿದ್ದು ಈ ಭಾಗದ ಭಕ್ತರ ಪಾಲಿಗೆ ವರಪ್ರದವಾಗಿದೆ.

ಬೇಡಿ ಬರುವ ಭಕ್ತರ ಪಾಲಿಗೆ ವರಸಿದ್ಧಿಯಾಗಿರುವ ಶ್ರೀ ಕೈಲಾಸ ವರಸಿದ್ಧಿ ಗಣಪತಿಯು ನಂಬಿದ ಭಕ್ತರ ಮನೋಕಾಮನೆಗಳನ್ನು ಸಿದ್ಧಿಸದೆ ಬಿಡಲಾರ. ಪರಿಪೂರ್ಣವಾಗಿ ಶರಣಾದ ಭಕ್ತರ ಸಂಕಷ್ಟಗಳಿಗೆ ಸ್ಪಂದಿಸುತ್ತಿರುವ ಶ್ರೀ ಕೈಲಾಸ ವರಸಿದ್ಧಿ ಗಣಪತಿಯ ಪವಾಡಗಳಿಂದಾಗಿ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಅನೇಕ ಜಿಲ್ಲೆಗಳಿಂದ, ಅಂತರ್ ರಾಜ್ಯಗಳಿಂದ ಈ ದೇವಸ್ಥಾನಕ್ಕೆ ಬರುತ್ತಿರುವ ಭಕ್ತರು ಅತ್ಯಂತ ಭಕ್ತಿಯಿಂದ ಗಣಪತಿಗೆ ಶರಣಾಗುತ್ತಿರುವುದನ್ನು ಕಂಡಾಗ ಶ್ರೀ ಕೈಲಾಸ ವರಸಿದ್ಧಿ ಗಣಪತಿಯ ಶಕ್ತಿಯ ಮಹತ್ವ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಗೋವಿಂದ ಕಾರಜೋಳ, ಮಾಜಿ ಸಚಿವ ಸಿ.ಸಿ. ಪಾಟೀಲ, ಮಾಜಿ ಸಂಸದ ಶಿವಕುಮಾರ ಉದಾಸಿ, ಮಾಜಿ ಸಚಿವ ಬಿ. ಶ್ರೀರಾಮುಲು, ಕಾನೂನು, ಸಂಸದೀಯ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲರು ಸೇರಿದಂತೆ ರಾಜ್ಯ-ರಾಷ್ಟ್ರಮಟ್ಟದ ವಿವಿಧ ರಾಜಕೀಯ ಪಕ್ಷಗಳ ನಾಯಕರು ಆಗಮಿಸಿ ಶ್ರೀ ಕೈಲಾಸ ವರಸಿದ್ಧಿ ಗಣಪತಿಯ ದರ್ಶನ ಪಡೆದಿದ್ದು, ಪಡೆಯುತ್ತಿರುವುದು ಇನ್ನಷ್ಟು ಭಕ್ತಿಯ ಸೆಲೆಯ ಶಕ್ತಿಯ ಗರಿಷ್ಠತೆಗೆ ಕಾರಣವಾಗಿದೆ.





ಉತ್ತರ ಕರ್ನಾಟಕದಲ್ಲಿಯೇ ಅತಿ ಎತ್ತರದ ಕಪ್ಪು ಶಿಲ್ಪಕಲೆಯ ಕುಳಿತ ಬಲಮುರಿ ವರದಾಯಕ ಗಣಪತಿ ಮೂರ್ತಿ ಎಂಬುದು ವಿಶೇಷತೆಯಾಗಿದೆ. ಈ ಮೂರ್ತಿ ಪ್ರಾಣಪ್ರತಿಷ್ಠೆಯನ್ನು ತಪೋನಿಷ್ಠರು, ಮಹಾಸಂಸ್ಥಾನ ಪೀಠಾಧೀಶರು, ಅನುಷ್ಠಾನಪರರು ಶ್ರೀ ಶ್ರೀ ಶ್ರೀ ತಿರುಚಿ ಮಹಾಸ್ವಾಮಿಗಳ ಅಮೃತ ಹಸ್ತದಿಂದ 1987 ಎಪ್ರಿಲ್ 15, 16, 17 ರಂದು ನೆರವೇರಿದ್ದು ಈ ಭಾಗದ ಧಾರ್ಮಿಕ ಇತಿಹಾಸದ ಪುಟಗಳಲ್ಲಿ ವಜ್ರಾಕ್ಷರಗಳಿಂದ ಬರೆಯುವಂತಾಗಿದೆ.

ಈ ದೇವಸ್ಥಾನದ ನಿರ್ಮಾಣ ಮತ್ತು ದೇವಸ್ಥಾನಕ್ಕೆ ಆಗಿರುವ ನಾಮಕರಣ, ದೇವರ ಮೂರ್ತಿ ರಚನೆಯು ಆಶ್ಚರ್ಯದಿಂದ ಕೂಡಿದೆ. 1984ರ ಸಂದರ್ಭದಲ್ಲಿ ಗದಗ ನಗರದಲ್ಲಿ ಗಣಪತಿಗಾಗಿ ಪ್ರತ್ಯೇಕ ದೇವಸ್ಥಾನ ಇರಲಿಲ್ಲ. ಈ ನೋವು ಗದಗ ಜನತೆಯನ್ನು ಕಾಡುತ್ತಿತ್ತು. ಈ ಕೊರಗನ್ನು ಅರ್ಥ ಮಾಡಿಕೊಂಡ ಗದಗ ನಗರದ ಮಸಾರಿ ಭಾಗದ ಹೋಟೆಲ್ ಉದ್ಯಮಿ ಬಿ. ಮಹಾಬಲರಾವ್ ಅವರು ಗದಗ ನಗರದ ಮಸಾರಿ ಭಾಗದಲ್ಲಿ ಪ್ರತ್ಯೇಕ ಗಣಪತಿ ದೇವಸ್ಥಾನ ನಿರ್ಮಿಸಲು ತೆ-ಊಟ್ಟ ಸಂಕಲ್ಪವೇ ಇಂದು ಕನ್ನಡನಾಡಿನ ಭಕ್ತರಲ್ಲಿ ಭಕ್ತವತ್ಸಲ ಗಣಪತಿಯಾಗಿ ಕಾಣಿಸಿಕೊಂಡಿರುವ ಗದಗ ನಗರದ 12ನೇ ವಾರ್ಡಿನ ಮಸಾರಿ ಭಾಗದ ಶ್ರೀ ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನವಾಗಿರುವುದು ಅತ್ಯಂತ ಹೆಮ್ಮೆಯ ಸಂಗತಿ.

ಬಿ. ಮಹಾಬಲರಾವ್ ಅವರು ಗಣಪತಿ ದೇವಸ್ಥಾನದ ನಿರ್ಮಾಣಕ್ಕೆ ಸ್ಫೂರ್ತಿಯಾಗಿ ನಿಂತವರು. ಹೋಟೆಲ್ ಉದ್ಯಮಿ ಆರ್.ಪಿ. ಕಾಮತ್ ಹಾಗೂ ಮಾಜಿ ಶಾಸಕ ಡಿ.ಆರ್. ಪಾಟೀಲ ಅವರ ಜೊತೆಗೆ ಹೋಟೆಲ್ ಉದ್ಯಮಿಗಳ ಸಂಘ ಮತ್ತು ಗಣ್ಯರ ಸಹಕಾರದಲ್ಲಿ ಈ ದೇವಸ್ಥಾನದ ನಿರ್ಮಾಣವಾಗಿದ್ದು, ಶ್ರೀ ಶ್ರೀ ಶ್ರೀ ತಿರುಚಿ ಮಹಾಸ್ವಾಮಿಗಳು ಈ ದೇವಸ್ಥಾನಕ್ಕೆ "ಶ್ರೀ ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನ"ವೆಂದು ನಾಮಕರಣ ಮಾಡುವ ಜೊತೆಗೆ ಗಣಪತಿ ಮೂರ್ತಿ ಹಾಗೂ ಪೀಠವನ್ನು ತಮ್ಮ ಮಹಾಸಂಸ್ಥಾನದಿಂದ ನಿರ್ಮಿಸಿಕೊಟ್ಟಿದ್ದು ಭಕ್ತರ ಪುಣ್ಯವೆಂತಲೇ ಹೇಳಬಹುದು.

ಈ ದೇವಸ್ಥಾನದ ನಿರ್ಮಾಣಕ್ಕೆ ಗಣ್ಯಮಾನ್ಯರು, ಸಾಮಾಜಿಕ, ಧಾರ್ಮಿಕ ಹಿತಚಿಂತಕರು, ಗಣಪತಿಯ ಸದ್ಭಕ್ತರು ಸೇರಿದಂತೆ ಬಹುತೇಕ ಎಲ್ಲ ವರ್ಗದ ಭಕ್ತರು ಎಲ್ಲ ರೀತಿಯ ನೆರವು ನೀಡಿದ್ದರಿಂದ ವರಪ್ರದಾಯಕ ಗಣನಾಯಕನಾಗಿ ಕಂಗೊಳಿಸುತ್ತಿದ್ದಾನೆ.

1987ರಿಂದ ಶ್ರೀ ಕೈಲಾಸ ವರಸಿದ್ಧಿ ಗಣಪತಿಯು ನೆಲೆನಿಂತು ಭಕ್ತರ ಭಾವನೆಗಳಿಗೆ ಸ್ಪಂದಿಸಿ ವರಸಿದ್ಧಿದಾತನಾಗಿ, ಭಕ್ತರ ಸಕಲ ಇಷ್ಟಾರ್ಥಗಳ ಕಾಮಧೇನು-ಕಲ್ಪವೃಕ್ಷವಾಗಿ, ವಿಘ್ನಗಳ ನಿವಾರಕನಾಗಿ ಕುಳಿತಿದ್ದು ನಮ್ಮೆಲ್ಲರ ಸೌಭಾಗ್ಯದ ಸ್ವರ್ಗವೇ ಎನ್ನುವಂತಾಗಿದೆ.

ದೇವಸ್ಥಾನಕ್ಕೆ ಯಾವುದೇ ವರಮಾನ ಅಥವಾ ಆಸ್ತಿ ಇಲ್ಲದಿದ್ದರೂ ಈ ಕೊರತೆಯನ್ನು ದೇವಸ್ಥಾನದ ಸದ್ಭಕ್ತರು ಈಡೇರಿಸಿದ್ದು ವಿಶೇಷವಾಗಿದೆ. ದೇವಸ್ಥಾನದ ಅಭಿವೃದ್ಧಿಪರ ಯೋಜನೆಗಳಿಗೆ, ಭಕ್ತರಿಗೆ ಅಗತ್ಯ ವ್ಯವಸ್ಥೆ ಮತ್ತು ಸಾರ್ವತ್ರಿಕ ಸೌಲಭ್ಯಗಳಿಗೆ ತನು-ಮನ-ಧನದಿಂದ ಸಹಾಯಕರಾಗಿ ನಿಂತ ಎಲ್ಲ ಸದ್ಭಕ್ತರ ಸೇವೆ ಅವಿಸ್ಮರಣೀಯ ಮತ್ತು ಅನುಕರಣೀಯವಾಗಿದೆ.

ಕನ್ನಡನಾಡಿನ ಸಕಲ ಸದ್ಭಕ್ತರಲ್ಲಿ ನೆಲೆನಿಂತಿರುವ ಶ್ರೀ ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನದಲ್ಲಿ ದಿನಾಂಕ 05-04-2026 ರವಿವಾರದಂದು 39ನೇ ವಾರ್ಷಿಕೋತ್ಸವ ನಡೆಯಲಿದ್ದು, ಇದರ ಅಂಗವಾಗಿ ವಿಶೇಷ ಗಣಹೋಮ ಹಾಗೂ ವಿವಿಧ ಧಾರ್ಮಿಕ ಪೂಜೆಗಳೊಂದಿಗೆ ಅರ್ಥಪೂರ್ಣ ಪೂಜಾ ಕೈಂಕರ್ಯಗಳು ಮತ್ತು ಸಾರ್ವತ್ರಿಕ ಮಹಾಪ್ರಸಾದವನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನವು ನಾಡಿನ ಖ್ಯಾತ ದೇವಸ್ಥಾನಗಳ ಪಟ್ಟಿಯಲ್ಲಿ ಸೇರುವಂತೆ ಶ್ರಮಿಸುತ್ತಿರುವ ದೇವಸ್ಥಾನದ ಟ್ರಸ್ಟ್ ಅಧ್ಯಕ್ಷ ಬಿ. ಪ್ರಸನ್ನಕುಮಾರ, ಕಾರ್ಯದರ್ಶಿ ಯೋಗೇಶ ವೋರಾ, ಖಜಾಂಚಿ ಪ್ರದೀಪಕುಮಾರ, ಟ್ರಸ್ಟಿಗಳಾದ ಮುಕುಂದ ಪೋತ್ನಿಸ್, ರಾಘವೇಂದ್ರ ಕುಂದಾಪೂರ ಹಾಗೂ ಪ್ರಧಾನ ಅರ್ಚಕರಾದ ವೇ.ಮೂ. ಕೆ.ವಿ. ಭಟ್ ಅವರನ್ನು ಅಭಿನಂದಿಸಲೇಬೇಕು. ಶ್ರೀ ಕೈಲಾಸ ವರಸಿದ್ಧಿ ಗಣಪತಿ ದೇವಸ್ಥಾನದೊಂದಿಗೆ ಸಕಲ ಸದ್ಭಕ್ತರು ಹೊಂದಿರುವ ಧಾರ್ಮಿಕ ಸಂಬಂಧಗಳು ಇನ್ನಷ್ಟು ವೃದ್ಧಿಯಾಗಿ, ದೇವಸ್ಥಾನದ ಅಭಿವೃದ್ಧಿಗೆ ಇನ್ನಷ್ಟು ಕೈಜೋಡಿಸಿ, ಬರುವ 40ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ನಡೆಯುವ ಐದು ದಿನಗಳ ಕಾರ್ಯಕ್ರಮಗಳನ್ನು 'ನ ಭೂತೋ ನ ಭವಿಷ್ಯ' ಎಂಬಂತೆ ಯಶಸ್ವಿಯಾಗಿ ನಡೆಸಲು ಸದ್ಭಕ್ತರು ಸಾಕ್ಷಿಯಾಗಬೇಕೆಂಬುದೇ ನಮ್ಮೆಲ್ಲರ ಆಶಯ.



**-ಡಾ. ಅನಂತ ಎಸ್. ಕಾರ್ಕಳ,**
ಗದಗ.

# ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಭಾರತ ಜನಗಣತಿ-2027 ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಗದಗ-ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ಮಹತ್ವದ ಮಾಹಿತಿ ನೀಡಲಾಗಿದೆ. ಸಾರ್ವಜನಿಕರು ಸರ್ಕಾರದ ಸ್ವಯಂ ಗಣತಿ (Self Enumeration) ವ್ಯವಸ್ಥೆಯಡಿ ಆನ್‌ಲೈನ್ ಮೂಲಕ ತಮ್ಮ ಕುಟುಂಬದ ವಿವರಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ಅಧಿಕೃತ ಪೋರ್ಟಲ್‌ಗಳಲ್ಲಿ ಲಾಗಿನ್ ಆಗಿ ತಮ್ಮ ಮನೆಯ ವಿವರಗಳು, ಕುಟುಂಬ ಸದಸ್ಯರ ಹೆಸರು, ವಯಸ್ಸು, ವಿದ್ಯಾರ್ಹತೆ, ಉದ್ಯೋಗ ಸೇರಿದಂತೆ ಅಗತ್ಯ ಮಾಹಿತಿಯನ್ನು ಎಪ್ರಿಲ್ 15, 2026ರವರೆಗೆ ಆನ್‌ಲೈನ್‌ನಲ್ಲಿ ಭರ್ತಿ ಮಾಡಬಹುದು.

ಮಾಹಿತಿ ಸಲ್ಲಿಸಿದ ನಂತರ ಸ್ವಯಂ ಗಣತಿ ಗುರುತಿನ ಸಂಖ್ಯೆ (ಐಡಿ) ದೊರೆಯುತ್ತದೆ. ನಂತರ ಗಣತಿದಾರರು ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಈ ಐಡಿಯನ್ನು ನೀಡಿದರೆ ಗಣತಿ ಪ್ರಕ್ರಿಯೆ ಸುಗಮವಾಗಿ ಹಾಗೂ ತ್ವರಿತವಾಗಿ ಪೂರ್ಣಗೊಳ್ಳಲಿದೆ.

ಅವಳಿ ನಗರದ ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ಸ್ಪರ್ಶದಿಂದ ರೈತ ಸಾವು

■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ

ಹೊಲಕ್ಕೆ ನೀರು ಹಾಯಿಸಲು ತೆರಳಿದ್ದ ರೈತನೊಬ್ಬ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ದುರ್ಘಟನೆ ಜಿಲ್ಲೆಯ ಕಿತ್ನೂರು ಗ್ರಾಮದ ವ್ಯಾಪ್ತಿಯಲ್ಲಿ ನಡೆದಿದೆ.

ಮೃತರನ್ನು ತೆಲುಗೋಳಿ ಗ್ರಾಮದ ನಿವಾಸಿ ವಡ್ಡರ ರಾಜಪ್ಪ (46) ಎಂದು ಗುರುತಿಸಲಾಗಿದೆ. ಎಪ್ರಿಲ್ 3ರಂದು ರಾತ್ರಿ ಸುಮಾರು 10:30 ಗಂಟೆಗೆ ಅವರು ತಮ್ಮ ಭತ್ತದ ಹೊಲಕ್ಕೆ ನೀರು ಹರಿಸಲು ತೆರಳಿದ್ದರು. ಈ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಗೊಂಡಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ರಾತ್ರಿ ಹೊಲಕ್ಕೆ ತೆರಳಿದ ರಾಜಪ್ಪ ಅವರು ಮನೆಗೆ ಮರಳದೇ ಇರುವುದರಿಂದ ಮತ್ತು ಫೋನ್ ಕರೆ ಸ್ವೀಕರಿಸದ ಹಿನ್ನೆಲೆಯಲ್ಲಿ ಪುತ್ರ ವಡ್ಡರ ರಮೇಶ್ ಅವರು ಎಪ್ರಿಲ್ 4ರ ಮುಂಜಾನೆ ಸುಮಾರು 5 ಗಂಟೆಗೆ ಹೊಲಕ್ಕೆ ತೆರಳಿದಾಗ ತಂದೆ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.



ಈ ಸಂಬಂಧ ಮೃತರ ಪುತ್ರ ರಮೇಶ್ ನೀಡಿದ ದೂರಿನ ಮೇರೆಗೆ ತಂಬ್ರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

# 5ಜನ ಕ್ರೀಡಾ ಪ್ರತಿಭೆಗಳಿಗೆ ಉಚಿತ ಪ್ರವೇಶ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ವಿಜಯ ಲಲಿತ ಕಲಾ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ವಿಜಯ ಪಿಯು ಕಾಮರ್ಸ್ ಕಾಲೇಜಿನಲ್ಲಿ ಪ್ರಸಕ್ತ ಸಾಲಿನ ಪ್ರವೇಶಾತಿ ಪ್ರಕ್ರಿಯೆ ಆರಂಭಗೊಂಡಿದ್ದು, ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಐದು ಉಚಿತ ಪ್ರವೇಶ ಸೀಟುಗಳನ್ನು ಘೋಷಿಸಲಾಗಿದೆ.

ಕ್ರೀಡಾ ಪ್ರತಿಭೆಗಳಿಗೆ ಮೊದಲ ಆದ್ಯತೆ ನೀಡಲಾಗಿದ್ದು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಕ್ರೀಡಾಕೂಟಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆರ್ಥಿಕ ಅಡಚಣೆಗಳಿಂದ ಯಾವುದೇ ಪ್ರತಿಭಾವಂತ ವಿದ್ಯಾರ್ಥಿ ಉತ್ತಮ ಶಿಕ್ಷಣದಿಂದ ವಂಚಿತರಾಗಬಾರದು ಎಂಬುದು ಸಂಸ್ಥೆಯ ಉದ್ದೇಶವಾಗಿದೆ.

ಕಾಲೇಜು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಒತ್ತು ನೀಡುತ್ತಿದ್ದು, ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾರ್ಗದರ್ಶನ ಹಾಗೂ ಬೆಂಬಲವನ್ನು ಒದಗಿಸುವ ಮೂಲಕ ಉತ್ತಮ ಭವಿಷ್ಯ ರೂಪಿಸುವ ಗುರಿಯನ್ನು ಹೊಂದಿದೆ.

ಅರ್ಹ ವಿದ್ಯಾರ್ಥಿಗಳು ತಮ್ಮ ಮೂಲ ಪ್ರಮಾಣಪತ್ರಗಳೊಂದಿಗೆ ಕಾಲೇಜಿನ ಕಚೇರಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 7845334293 / 7975177131 ಸಂಪರ್ಕಿಸಲು ಕೋರಲಾಗಿದೆ.

# ಶರಣರ ಮೇರು ಪರ್ವತ ಅಲ್ಲಮಪ್ರಭು

## ಮುಳಗುಂದದಲ್ಲಿ ಜಾತ್ರಾ ಮಹೋತ್ಸವ ವೈಭವ; ರಥೋತ್ಸವ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಹೊರವಲಯದಲ್ಲಿ ಅಲ್ಲಮಪ್ರಭು ದೇವರ ಜಾತ್ರಾ ಮಹೋತ್ಸವವನ್ನು ಭಕ್ತಿಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ. ಬಳಿಗೇರ ಮಾತನಾಡಿ, ಅಲ್ಲಮಪ್ರಭುದೇವರು ಶರಣರ ಮೇರು ಪರ್ವತವಾಗಿದ್ದಾರೆ ಎಂದು ಹೇಳಿದರು.

ಅಲ್ಲಮಪ್ರಭುಗಳ ಬೆಡಗಿನ ವಚನಗಳು ಆಳವಾದ ತತ್ವ ಚಿಂತನೆಗಳನ್ನು ಒಳಗೊಂಡಿವೆ. ಅವರು ಕಾಯಕ ತತ್ವ, ಜಂಗಮ ದಾಸೋಹದ ಮೂಲಕ ಸಮಾನತೆ ಮತ್ತು ಸಾಮರಸ್ಯದ ಬದುಕನ್ನು ಸಾರಿದ ಮಹಾನ್ ಶರಣರಾಗಿದ್ದಾರೆ. ಅವರ ಜೀವನ ಹಾಗೂ ವಚನಗಳು ಇಂದಿಗೂ ದಾರಿದೀಪವಾಗಿದ್ದು, ಅವರ ತತ್ವ-ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಮುಳಗುಂದ ಹೋಬಳಿ ಘಟಕದ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಂಜುನಾಥ ಮಟ್ಟಿ ಮಾತನಾಡಿ, ಮುಳಗುಂದ ನಾಡು ಶರಣರ ಪವಿತ್ರ ನೆಲೆಬೀಡಾಗಿದ್ದು, ಅಲ್ಲಮಪ್ರಭುಗಳು ಇಲ್ಲಿ ಆಗಮಿಸಿದ್ದರಿಂದ ಈ ಪ್ರದೇಶಕ್ಕೆ ವಿಶೇಷ ಮಹತ್ವ ಇದೆ ಎಂದು ಹೇಳಿದರು. ಶರಣರ ಆದರ್ಶಗಳನ್ನು ಅನುಸರಿಸುವುದು ಇಂದಿನ ಸಮಾಜಕ್ಕೆ ಅಗತ್ಯವಾಗಿದೆ ಎಂದರು.

ಜಾತ್ರಾ ಮಹೋತ್ಸವದ ಅಂಗವಾಗಿ ಸಾಧಕರಿಗೆ ಸನ್ಮಾನ, ಯೋಗ ಪ್ರದರ್ಶನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಮಹಾ ರಥೋತ್ಸವವು ವಿವಿಧ ವಾದ್ಯಮೇಳಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಸಾನಿಧ್ಯವನ್ನು ಸಿದ್ದರಾಮಯ್ಯ ಹಿರೇಮಠ ವಹಿಸಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೀರಭದ್ರಪ್ಪ ಹರ್ತಿ ವಹಿಸಿದ್ದರು. ಈ ಸಂದರ್ಭದಲ್ಲಿ ಕೆ.ಎ. ಬಳಿಗೇರ, ಸೋಮಣ್ಣ ನಡುಕಟ್ಟಿ, ಮಂಗಳಾ ನೀಲಗುಂದ, ಪ್ರಕಾಶ ಮದ್ದಿನ, ಮಂಜುನಾಥ ಮಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಎಲ್‌ಪಿಜಿ ದರ ಏರಿಕೆಯಿಂದ ಆಟೋ ಚಾಲಕರ ಸಂಕಷ್ಟ!

## ಉಚಿತ ಪೆಟ್ರೋಲ್-ಗ್ಯಾಸ್ ಬೇಡಿಕೆ; ಸರ್ಕಾರ ವಿರುದ್ಧ ಹೋರಾಟದ ಎಚ್ಚರಿಕೆ



> "ಎಲ್‌ಪಿಜಿ ಗ್ಯಾಸ್ ದರ ಏರಿಕೆಯಿಂದ ಆಟೋ ಚಾಲಕರ ಆದಾಯದಲ್ಲಿ ಭಾರೀ ಕುಸಿತ ಉಂಟಾಗಿದೆ. ಸರ್ಕಾರ ತಕ್ಷಣ ಮಧ್ಯಪ್ರವೇಶಿಸಿ ಅಗತ್ಯ ನೆರವು ಒದಗಿಸಬೇಕು."
> **- ರಾಜು ಖಾನಪ್ಪನವರ್,** ಹೋರಾಟಗಾರ.

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರಾಚ್ಯ ದೇಶಗಳಲ್ಲಿ ಉಂಟಾದ ಯುದ್ಧದ ಹಿನ್ನೆಲೆಯಲ್ಲಿ ಎಲ್‌ಪಿಜಿ ಗ್ಯಾಸ್ ದರ ಏರಿಕೆಯಾಗಿರುವುದು ಗದಗ ನಗರದಲ್ಲಿನ ಆಟೋ ಚಾಲಕರ ಮೇಲೆ ಗಂಭೀರ ಪರಿಣಾಮ ಬೀರಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದರಗಳಿಂದ ಆಟೋ ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಜೀವನ ನಿರ್ವಹಣೆ ಕಷ್ಟಕರವಾಗಿದೆ ಎಂದು ಅಳಲು ವ್ಯಕ್ತಪಡಿಸಿದ್ದಾರೆ.

ಆಟೋ ಚಾಲಕರಿಗೆ ಸಮರ್ಪಕವಾಗಿ ಎಲ್‌ಪಿಜಿ ಗ್ಯಾಸ್ ಲಭ್ಯವಾಗುತ್ತಿಲ್ಲ ಎಂಬುದೂ ಪ್ರಮುಖ ಸಮಸ್ಯೆಯಾಗಿದ್ದು, ಇದರಿಂದ ಉದ್ಯೋಗ ನಿರ್ವಹಣೆಯೇ ಅಸಾಧ್ಯವಾಗುತ್ತಿದೆ ಎಂದು ತಿಳಿಸಿದ್ದಾರೆ. ದರ ಏರಿಕೆಯಿಂದ ದಿನದ ಆದಾಯ ಕುಸಿದಿದ್ದು, ಮನೆ ಬಾಡಿಗೆ, ಮಕ್ಕಳ ಶಿಕ್ಷಣ ಸೇರಿದಂತೆ ಕುಟುಂಬದ ಖರ್ಚುಗಳನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದ್ದಾರೆ.

ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ, ಅದೇ ಮಾದರಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವ ಆಟೋ ಚಾಲಕರಿಗೆ ವಿಶೇಷ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ. ಪ್ರತಿ ದಿನ ಎರಡು ಲೀಟರ್ ಪೆಟ್ರೋಲ್ ಹಾಗೂ ಎರಡು ಕೆಜಿ ಎಲ್‌ಪಿಜಿ ಗ್ಯಾಸ್ ಉಚಿತವಾಗಿ ನೀಡುವಂತೆ ಮನವಿ ಮಾಡಿದ್ದಾರೆ.


ಆಟೋ ಸೇನೆಯ ನಗರಾಧ್ಯಕ್ಷ ಮೌನೇಶ್ ದಾಸರ ಮಾತನಾಡಿ, "ಸರ್ಕಾರ ಆಟೋ ಚಾಲಕರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಹೋರಾಟ ಅನಿವಾರ್ಯ" ಎಂದು ಎಚ್ಚರಿಸಿದರು.

ಆಟೋ ಚಾಲಕ ಶ್ರೀನಿವಾಸ್ ಕೂಡಾ, "ದಿನನಿತ್ಯದ ಆದಾಯದಿಂದ ಕುಟುಂಬ ನಿರ್ವಹಣೆ ಕಷ್ಟವಾಗುತ್ತಿದೆ" ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ತಕ್ಷಣವೇ ಎಲ್‌ಪಿಜಿ ದರ ಇಳಿಕೆ ಹಾಗೂ ಆಟೋ ಚಾಲಕರಿಗೆ ನೆರವು ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿ, ಇಲ್ಲವಾದರೆ ತೀವ್ರ ಹೋರಾಟ ಕೈಗೊಳ್ಳುವುದಾಗಿ ಚಾಲಕರು ಎಚ್ಚರಿಕೆ ನೀಡಿದ್ದಾರೆ.



# ಸಹಕಾರ ಸಂಘದ ಅಧ್ಯಕ್ಷರಾಗಿ ಬಸಪ್ಪ ಕವಲೂರು ಆಯ್ಕೆ



**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಂ.3 ರ ನೂತನ ಅಧ್ಯಕ್ಷರಾಗಿ ಕುಶ ಬಸಪ್ಪ ಕವಲೂರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ಸಂಜೆ ನಡೆದ ಸಭೆಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಸದಸ್ಯರ ಏಕಮತದಿಂದ ಕುಶ ಬಸಪ್ಪ ಕವಲೂರು ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ. ಇದೆ ಸಂದರ್ಭದಲ್ಲಿ ಉಪಾಧ್ಯಕ್ಷರಾಗಿ ಮುದಕಪ್ಪ ಕಲ್ಲಪ್ಪ ಅಂಬಕ್ಕಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನಿರ್ದೇಶಕರಾಗಿ ಮಹಾದೇವಯ್ಯ ನರಗುಂದಮಠ, ಬಸಪ್ಪ ಕಲ್ಯಾಣಶೆಟ್ರ, ಮುತ್ತಪ್ಪ ಮುದ್ದಿಕೋಲ, ಯಲ್ಲಪ್ಪ ಪೂಜಾರ, ಬಸವಂತಪ್ಪ ಹಿರೇಹಾಳ, ಉಮೇಶಪ್ಪ ರೇವಡಿ, ಪ್ರೇಮಾ ಮಟ್ಟಿ, ಶೈಲಾ ಸೊಪ್ಪಿನ ಹಾಗೂ ಮಲ್ಲಪ್ಪ ದಂಡಿನ ಆಯ್ಕೆಯಾಗಿದ್ದಾರೆ.

ಚುನಾವಣಾ ಪ್ರಕ್ರಿಯೆಗೆ ಗದಗ ಸಹಕಾರ ಇಲಾಖೆಯ ಶಾಂತಾ ಹಿರೇಮಠ ಅವರು ಚುನಾವಣಾ ಅಧಿಕಾರಿಯಾಗಿ ಭಾಗವಹಿಸಿದ್ದರು.

# ಲಕ್ಷ್ಮೇಶ್ವರ ಪುರಸಭೆ ಬಜೆಟ್ 26 ಕೋಟಿ ಘೋಷಣೆ

## ಮೂಲಸೌಕರ್ಯ, ನೀರು ಮತ್ತು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ; 93.14 ಲಕ್ಷ ಉಳಿತಾಯ

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ 2026-27ನೇ ಸಾಲಿನ ಪುರಸಭೆ ಬಜೆಟ್ ಅನ್ನು ಮುಖ್ಯಾಧಿಕಾರಿ ಮಹಾಂತೇಶ ಬೀಳಗಿ ಮಂಡಿಸಿದ್ದು, ಒಟ್ಟು 26.24 ಕೋಟಿ ಗಾತ್ರದ ಬಜೆಟ್ ಘೋಷಿಸಲಾಗಿದೆ. ಈ ಸಾಲಿನಲ್ಲಿ 93.14 ಲಕ್ಷ ಉಳಿತಾಯ ಬಜೆಟ್ ನಿರ್ಧಾರಗೊಂಡಿದೆ.



ಪುರಸಭೆಯ ಆದಾಯವನ್ನು ನೇರ ಹಾಗೂ ಅನುದಾನ ಮೂಲಗಳಿಂದ ಅಂದಾಜಿಸಲಾಗಿದೆ. ಮನೆ, ಮಳಿಗೆ ಬಾಡಿಗೆ, ನೀರಿನ ಕರ ಸೇರಿದಂತೆ ನೇರ ಆದಾಯದಿಂದ 3.93 ಕೋಟಿ, ಎಸ್‌ಎಫ್‌ಸಿ ಮುಕ್ತ ನಿಧಿ, 16ನೇ ಹಣಕಾಸು ಸೇರಿದಂತೆ ಅನುದಾನಗಳಿಂದ 10.55 ಕೋಟಿ ಹಾಗೂ ಅಸಾಮಾನ್ಯ ಖಾತೆಯಿಂದ 1.61 ಕೋಟಿ ಆದಾಯ ನಿರೀಕ್ಷಿಸಲಾಗಿದೆ. ಈ ಮೂಲಕ ಒಟ್ಟು ಆದಾಯ 16.10 ಕೋಟಿ ಆಗಿದ್ದು, ವಿವಿಧ ಶುಲ್ಕ ಸೇರಿ ಬಜೆಟ್ ಗಾತ್ರ 26.24 ಕೋಟಿ ಆಗಿದೆ.

ವೆಚ್ಚ ಹಂಚಿಕೆಯ ಪ್ರಕಾರ ಆಡಳಿತ, ನೀರು ಸರಬರಾಜು, ಬೀದಿ ದೀಪ, ಸಾರ್ವಜನಿಕ ಆರೋಗ್ಯ ಮತ್ತು ಸ್ವಚ್ಛತೆಗೆ 4.21 ಕೋಟಿ ಮೀಸಲಾಗಿದೆ. ಅನುದಾನದಿಂದ ಬಂದ ಮೊತ್ತವನ್ನು ನೌಕರರ ವೇತನ, ವಿದ್ಯುತ್ ಬಿಲ್, ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 17.85 ಕೋಟಿ ವಿನಿಯೋಗಿಸಲಾಗಿದೆ. ಕೆರೆ ಅಭಿವೃದ್ಧಿಗೆ 15 ಲಕ್ಷ, ಮಳಿಗೆ ನಿರ್ಮಾಣಕ್ಕೆ 1 ಕೋಟಿ ಹಾಗೂ ಸರಕಾರಕ್ಕೆ ತೆರಿಗೆ ಪಾವತಿಗೆ 1.69 ಕೋಟಿ ಮೀಸಲಾಗಿದೆ.

ಮುಂಭರುವ ದಿನಗಳಲ್ಲಿ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೆ ಏರಿಸುವ ಗುರಿ ಹೊಂದಲಾಗಿದ್ದು, 36 ಕೋಟಿ ಕುಡಿಯುವ ನೀರಿನ ಯೋಜನೆಯನ್ನು ತ್ವರಿತ ಅನುಷ್ಠಾನಕ್ಕೆ ತರುವುದಾಗಿ ತಿಳಿಸಲಾಗಿದೆ.

ನಗರ ಸ್ವಚ್ಛತೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಈ ಸಂದರ್ಭದಲ್ಲಿ ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ಕಂದಾಯ ಅಧಿಕಾರಿ ಸುರೇಶ ಪೂಜಾರ, ಕಂದಾಯ ನಿರೀಕ್ಷಕ ವೆಂಕಟೇಶ ರಾಮಗೇರಿ, ಹಣಕಾಸು ವಿಭಾಗದ ನೇತ್ರಾ ಹೊಸಮನಿ, ಮಹೇಶ ಹೊಸಮನಿ ಹಾಗೂ ಹನುಮಂತಪ್ಪ ನಂದೆಣ್ಣವರ ಉಪಸ್ಥಿತರಿದ್ದರು.

"ಪಟ್ಟಣದ ಅಭಿವೃದ್ಧಿಗೆ ಸಮತೋಲನದ ಬಜೆಟ್ ರೂಪಿಸಲಾಗಿದೆ; ಕುಡಿಯುವ ನೀರು ಮತ್ತು ಸ್ವಚ್ಛತೆಗೆ ವಿಶೇಷ ಗಮನ ಹರಿಸಲಾಗಿದೆ."

**– ಮಹಾಂತೇಶ ಬೀಳಗಿ,** ಮುಖ್ಯಾಧಿಕಾರಿ, ಲಕ್ಷ್ಮೇಶ್ವರ.

**ಬಡಜನರ ಕಲ್ಯಾಣಕ್ಕೆ ವಿಶೇಷ ಮೀಸಲು**

ಎಸ್‌ಸಿ/ಎಸ್‌ಟಿ ಪಂಗಡದ ಕಲ್ಯಾಣಕ್ಕೆ 6.21 ಲಕ್ಷ, ಇತರೆ ಬಡಜನಾಂಗದವರಿಗೆ 1.66 ಲಕ್ಷ ಹಾಗೂ ಅಂಗವಿಕಲರ ಕಲ್ಯಾಣಕ್ಕೆ 1.11 ಲಕ್ಷ ಮೀಸಲಿರಿಸಲಾಗಿದೆ.

# ಎ. 12ರಂದು ಚೆಸ್ ಪಂದ್ಯಾವಳಿ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತಾಲೂಕು ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಸದ್ಗುರು ಚೆಸ್ ಮತ್ತು ಮ್ಯೂಸಿಕ್ ಅಕಾಡೆಮಿ ಹಾಗೂ ಗದಗ ಚೆಸ್ ಅಕಾಡೆಮಿ ಸಹಯೋಗದಲ್ಲಿ ಎಪ್ರಿಲ್ 12 ರಂದು ಚೆಸ್ ಪಂದ್ಯಾವಳಿಯನ್ನು ಏರ್ಪಡಿಸಲಾಗಿದೆ.

ಗದಗನ ಕಳಸಾಪೂರ ರಸ್ತೆಯಲ್ಲಿಯ ಒಳಾಂಗಣ ಕ್ರೀಡಾಂಗಣದಲ್ಲಿ ಒಂದು ದಿನದ ಪಂದ್ಯಾವಳಿಯಲ್ಲಿ ಎಲ್ಲ ವಯೋಮಿತಿಯವರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ವಿಜೇತರಿಗೆ ಅತ್ಯಾಕರ್ಷಕ ಟ್ರೋಫಿ ಮತ್ತು ನಗದು ಬಹುಮಾನ ನೀಡಲಾಗುವುದು. ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಭಾಗವಹಿಸುವವರು ಎಪ್ರಿಲ್ 10 ರೊಳಗಾಗಿ ಹೆಸರು ನೋಂದಾಯಿಸಲು ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8431737265, 9535027184 ಸಂಪರ್ಕಿಸಿ.

# 39ನೇ ದಾಸಿಮಯ್ಯನವರ ಹುಣ್ಣಿಮೆ ವಚನ ವಾಚನ ಕಾರ್ಯಕ್ರಮ



**■ ವಿಜಯಸಾಕ್ಷಿ ಸುದ್ದಿ, ಗದಗ**

ಬೆಟಗೇರಿ ಶ್ರೀ ದೇವರ ದಾಸಿಮಯ್ಯ ಪುತ್ಥಳಿ ಹತ್ತಿರ 39ನೇ ದಾಸಿಮಯ್ಯನವರ ಹುಣ್ಣಿಮೆ ವಚನ-ವಾಚನ ಕಾರ್ಯಕ್ರಮ "ದವನದ ಹುಣ್ಣಿಮೆ" ಭಕ್ತಿಭಾವದಿಂದ ಜರುಗಿತು. ನಗರಸಭಾ ಸದಸ್ಯೆ ಶಕುಂತಲಾ ಅಕ್ಕಿ ಶ್ರೀ ದೇವರ ದಾಸಿಮಯ್ಯ ಪುತ್ಥಳಿಗೆ ಪೂಜೆ ನೆರವೇರಿಸಿ, ದಾರ್ಶನಿಕರ ವಚನಗಳು ಸಮಾಜದಲ್ಲಿ ಸುಧಾರಣೆ ಮತ್ತು ನೈತಿಕ ಚಿಂತನಕ್ಕೆ ಪ್ರೇರಣೆ ನೀಡಬೇಕು ಎಂದು ಹೇಳಿದರು.

ಸಾಹಿತಿ ರಾಮಚಂದ್ರ ಹುಬ್ಬಳ್ಳಿ ಅವರು ವಚನಗಳ ಮೂಲಕ ಜೀವನದ ನೈತಿಕ ಮೌಲ್ಯಗಳ ಕುರಿತು ಸ್ಫೂರ್ತಿದಾಯಕ ಸಂದೇಶ ನೀಡಿದರು. "ಹೇಳಿತ್ತ ಕೇಳುವನ ಕೀಳಿನೊಳಗಿರೆ ಲೇಸು! ಹೇಳಿತ್ತ ಕೇಳದ ಕಡುಮೂರ್ಖತನ ಕೋಣೆಯುಲ್ಲಿರಲಾಗದು!" ಎಂದು ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವುದರ ಮಹತ್ವವನ್ನು ವಿವರಿಸಿದರು.

ದಾಸಿಮಯ್ಯನವರ ವಚನಗಳನ್ನು ಓದಿದ ದೊಡ್ಡಪ್ಪ ಮೂಲಿಮನಿ, "ಸತಿಪತಿಗಳೊಂದಾದ ಭಕ್ತಿ ಹಿತವಾಗುತ್ತದೆ, ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣುತ್ತದೆ" ಎಂದರು.

ಕಾರ್ಯಕ್ರಮದಲ್ಲಿ ಬೆಟಗೇರಿ ಠಾಣೆಯ ಪಿಎಸ್‌ಐ ಅತಿಥಿಯಾಗಿ ಭಾಗವಹಿಸಿ, ದಾಸಿಮಯ್ಯನವರ ದಾರ್ಶನಿಕ ವಚನಗಳು ಇಂದಿಗೂ ನಮ್ಮ ಜೀವನಕ್ಕೆ ಮಾದರಿಯಾಗುತ್ತಿವೆ ಎಂದು ಹೇಳಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ದಶರಥರಾಜ ಕೊಳ್ಳಿ, ಶ್ರೀನಿವಾಸ ಹುಬ್ಬಳ್ಳಿ, ಅನಿಲ್ ಗಡ್ಡಿ, ಶಂಕ್ರಣ್ಣ ಹಾದಿಮನಿ, ಶಂಕ್ರಪ್ಪ ಗಂಜಿ, ಶಂಕ್ರಣ್ಣ ಗಂಜಿ, ಸೀತಾರಾಮ ದುತ್ತರಗಿ, ಶಂಕ್ರಪ್ಪ ಬೆನಕಲ್, ಸಂದೇಶ ಹುಬ್ಬಳ್ಳಿ, ಎನ್. ಜೆ. ಪಟ್ಟದಕಲ್, ಬಸವರಾಜ್ ಮುದುಗಲ್ ಉಪಸ್ಥಿತರಿದ್ದರು.

# ವೀರಶೈವ ಮಹಾಸಭಾದ ಆಜೀವ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ಅಖಿಲ ಭಾರತ ವೀರಶೈವ ಮಹಾಸಭಾದ ಆಜೀವ ಸದಸ್ಯರಿಗೆ ಗುರುತಿನ ಚೀಟಿ ಹಂಚಿಕೆ ಇತ್ತೀಚೆಗೆ ಗಜೇಂದ್ರಗಡ ತಾಲ್ಲೂಕಿನಲ್ಲಿ ಜರುಗಿತು.

ಮಾಜಿ ಸಚಿವ ಕಳಕಪ್ಪ ಜಿ. ಬಂಡಿ ಅವರ ನೇತೃತ್ವದಲ್ಲಿ 574 ಆಜೀವ ಸದಸ್ಯತ್ವ ಕಾರ್ಡುಗಳನ್ನು ಸದಸ್ಯರಿಗೆ ವಿತರಿಸಲಾಯಿತು.

ಸಭೆಯಲ್ಲಿ ಗಜೇಂದ್ರಗಡ ಹಾಗೂ ರೋಣ ತಾಲ್ಲೂಕಿನಲ್ಲಿ ಮಹಾಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ಸಂಘಟನೆಯ ಬಲವರ್ಧನೆಗೆ ಒಪ್ಪಿಗೆಯನ್ನು ಪಡೆಯಲು ಸದಸ್ಯರನ್ನು ಮನವಿ ಮಾಡಲಾಯಿತು. ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ಅವರು ಎಲ್ಲರನ್ನು ಸಂಘಟನೆಯ ಶಕ್ತಿ ಹೆಚ್ಚಿಸಲು ಮುಂದಾಗಬೇಕೆಂದು ಮನವಿ ಮಾಡಿದರು. ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ಮಾತನಾಡಿ, ಗದಗ ಜಿಲ್ಲೆಯ ನರಗುಂದ, ಗಜೇಂದ್ರಗಡ, ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲ್ಲೂಕು ಘಟಕಗಳಿಗೆ ಚುನಾವಣೆ ನಡೆಸಬೇಕಾಗಿದೆ. ಮಹಾಸಭಾದ ಆಜೀವ ಸದಸ್ಯತ್ವಕ್ಕೆ ಎಪ್ರಿಲ್ 4 ಕೊನೆಯ ದಿನಾಂಕ. ಮತದಾರರ ತಾತ್ಕಾಲಿಕ ಪಟ್ಟಿಯನ್ನು ಎಪ್ರಿಲ್ 15ರಂದು ಪ್ರಕಟಿಸಲಾಗುವುದು, ಅಂತಿಮ ಪಟ್ಟಿಯನ್ನು ಎಪ್ರಿಲ್ 23ರಂದು ಪ್ರಕಟಿಸಲಾಗುವುದು. ನಾಮಪತ್ರ ಸ್ವೀಕರಿಸುವ ಪ್ರಕ್ರಿಯೆ ಎಪ್ರಿಲ್ 29ರಿಂದ ಮೇ. 6 ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದೆ. ನಾಮಪತ್ರ ಪರಿಶೀಲನೆ ಮೇ. 7ರಂದು, ನಾಮಪತ್ರ ಹಿಂಪಡೆಯುವ ಕೊನೆಯ ದಿನ ಮೇ. 10. ಮೇ. 24ರಂದು ಭಾನುವಾರ ಮುಂಜಾನೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಮತದಾನದ ನಂತರ ಅದೇ ದಿನ ಮತಗಳ ಎಣಿಕೆ ನಡೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜದ ಹಿರಿಯರು, ಆಜೀವ ಸದಸ್ಯರು ಮತ್ತು ಮಹಿಳೆಯರು ಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಖಜಾಂಚಿ ಚನ್ನವೀರಪ್ಪ ಹುಣಶೀಕಟ್ಟಿ, ಯುವ ಘಟಕದ ಅಧ್ಯಕ್ಷ ಶಿವರಾಜ ಹಿರೇಮನಿಪಾಟೀಲ ಮುಂತಾದವರು ಉಪಸ್ಥಿತರಿದ್ದರು.



# ಎ.8ರಿಂದ ಈಶ್ವರಿಯ ವಿಶ್ವ ವಿದ್ಯಾಲಯದಲ್ಲಿ ಬೇಸಿಗೆ ಶಿಬಿರ



**■ ವಿಜಯಸಾಕ್ಷಿ ಸುದ್ದಿ, ಗದಗ**

11 ರಿಂದ 16 ವಯಸ್ಸಿನ ಮಕ್ಕಳಿಗಾಗಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯವು 10 ದಿನಗಳ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಿದೆ. ಈ ಶಿಬಿರವು ಸಂವಾದಾತ್ಮಕ ತರಗತಿಗಳು, ರಚನಾತ್ಮಕ ಕಾರ್ಯಾಗಾರಗಳು ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಕಾರ್ಯಕ್ರಮವನ್ನು ಡಿಡಿಪಿಐ ಕಚೇರಿ ಡಿವೈಪಿಸಿ ರವಿಪ್ರಕಾಶ್, ವಿಷಯ ಪರಿವೀಕ್ಷಕರು ಹೆಚ್.ಬಿ. ರೆಡ್ಡರ್, ಗದಗ ಗ್ರಾಮೀಣದ ಜೆ.ಎ. ಭಾವಿಕಟ್ಟಿ, ಗದಗ ನಗರದ ಬಿಆರ್‌ಸಿ ಎಸ್.ಪಿ. ಪ್ರಭಯ್ಯಮಠ ಮತ್ತು ಬ್ರಹ್ಮಾಕುಮಾರಿ ಜಯಂತಿ ಅಕ್ಕನವರು ಅನಾವರಣಗೊಳಿಸಿದರು.

ಶಿಬಿರದಲ್ಲಿ ಭಾಗವಹಿಸುವ ಮಕ್ಕಳಿಗೆ ನೈತಿಕ ಶಿಕ್ಷಣ, ಮೌಲ್ಯ ಶಿಕ್ಷಣ, ಸ್ವತಃನದ ಪರಿವರ್ತನೆ, ಅಧ್ಯಾತ್ಮ ಲೋಕದ ಅಚ್ಚರಿಯ ರಹಸ್ಯಗಳು, ಆರೋಗ್ಯ ಜ್ಞಾನ, ಶ್ಲೋಕ ಪಠಣ, ವಚನ ಮತ್ತು ಜ್ಞಾನಯುಕ್ತ ಗೀತೆಗಳ ಪಾಠ, ರಾಜಯೋಗ ಮೆಡಿಟೇಶನ್, ಯೋಗಾಸನ, ಪ್ರಾಣಾಯಾಮ, ಗುಡ್ ಮ್ಯಾನ್‌ರ್ಸ್, ಕ್ರಾಫ್ಟ್, ಚಿತ್ರಕಲೆ ಮತ್ತು ಮೆಮೋರಿ ಮ್ಯಾನೇಜ್‌ಮೆಂಟ್ ತರಬೇತಿಗಳು ನೀಡಲಾಗುತ್ತದೆ.

ಈ ಶಿಬಿರವು 08-04-2026 ಬುಧವಾರದಿಂದ 18-04-2026 ರವರೆಗೆ, ಪ್ರತಿದಿನ ಬೆಳಿಗ್ಗೆ 10ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ಗದಗ ನಗರದಲ್ಲಿ ಶಿಬಿರ ಮೂರು ಕೇಂದ್ರಗಳಲ್ಲಿ ನಡೆಯಲಿದೆ: ಬ್ರಹ್ಮಾಕುಮಾರೀಸ್, ಬಸವೇಶ್ವರ ನಗರ (ಮೊ: 6360753992), ಬ್ರಹ್ಮಾಕುಮಾರೀಸ್, ಆಧ್ಯಾತ್ಮಿಕ ಸಂಸ್ಕೃತಿ ಭವನ, ಡಂಬಳ ನಾಕಾ, ಸಿದ್ದರಾಮೇಶ್ವರ ನಗರ (ಮೊ: 8147241750), ಮತ್ತು ಬ್ರಹ್ಮಾಕುಮಾರೀಸ್, ಹೊಸಪೇಟ್ ಚೆಕ್, ಬೆಟಗೇರಿ (ಮೊ: 9632769950).

ಶಿಬಿರದಲ್ಲಿ ಪಾಲ್ಗೊಳ್ಳುವ ಆಸಕ್ತರು ತಮ್ಮ ಹೆಸರು, ತರಗತಿ ಮತ್ತು ಶಾಲೆಯ ವಿವರಗಳನ್ನು ತಮ್ಮ ಆಯ್ಕೆ ಮಾಡಿದ ಶಿಬಿರ ಕೇಂದ್ರದ ಮೊಬೈಲ್ ನಂಬರ್‌ಗೆ ವಾಟ್ಸಪ್ ಮೂಲಕ ಕಳುಹಿಸಬೇಕು. ಶಿಬಿರದಲ್ಲಿ ಪೂರ್ಣ ಹಾಜರಿರುವ ಮಕ್ಕಳಿಗೆ ಸರ್ಟಿಫಿಕೇಟ್ ನೀಡಲಾಗುವುದು. ಪಾಲ್ಗೊಳ್ಳುವ ಮಕ್ಕಳು ಪೆನ್, ಪುಸ್ತಕ, ಯೋಗಾಸನಕ್ಕೆ ಬೆಡ್‌ಶೀಟ್ ಮತ್ತು ನೀರಿನ ಬಾಟಲ್ ಅನ್ನು ತರಬೇಕಾಗಿದೆ.

ಬ್ರಹ್ಮಾಕುಮಾರಿ ಜಯಂತಿ ಅಕ್ಕನವರು ಶಿಬಿರ-ಕ್ಕೆ ಚಾಲನೆ ನೀಡುತ್ತಾ, "ಈ ಸುವರ್ಣಾವಕಾಶವನ್ನು ಬಳಸಿಕೊಂಡು ನಿಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಿ" ಎಂದು ಮಕ್ಕಳಿಗೆ ವಿಶೇಷವಾಗಿ ಕರೆ ನೀಡಿದರು.

# ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಿ



**■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ತಮ್ಮ ಕೌಶಲ್ಯ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ವೃದ್ಧಿಪಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಕೋಚಲಾಪುರ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ವಿಜಯಕುಮಾರ ಡಿ.ಆರ್. ಹೇಳಿದರು.

ನಗರದ ಸೈಬರ್‌ಟೆಕ್ ಕಂಪ್ಯೂಟರ್ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ನೀಡಿದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಮೊದಲು ಮಾನಸಿಕ ಸಿದ್ಧತೆ ಮುಖ್ಯ. ಸಿದ್ಧತೆಗೆ ಅಗತ್ಯವಾದ ಸೌಲಭ್ಯಗಳು, ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇಂದಿನ ಯುಗ ಸಂಪೂರ್ಣ ಡಿಜಿಟಲ್ ಆಗಿದ್ದು, ಕಂಪ್ಯೂಟರ್ ಜ್ಞಾನವು ಅನಿವಾರ್ಯವಾಗಿದೆ. ಕಂಪ್ಯೂಟರ್ ಶಿಕ್ಷಣದ ಜೊತೆಗೆ ಕೃತಕ ಬುದ್ಧಿಮತ್ತೆ (ಎಐ) ಎಂಬ ಹೊಸ ಕ್ಷೇತ್ರದ ಕುರಿತು ತಿಳಿದುಕೊಳ್ಳುವುದು ಕೂಡ ಅವಶ್ಯಕ. ವಿಜ್ಞಾನ ದಿನನಿತ್ಯ ಅಭಿವೃದ್ಧಿಯಾಗುತ್ತಿದ್ದು, ಹೊಸ ಆವಿಷ್ಕಾರಗಳ ಬಗ್ಗೆ ಸದಾ ಅರಿವು ಹೊಂದಿರಬೇಕು ಎಂದರು.

ವಿದ್ಯಾರ್ಥಿಗಳು ಕೇವಲ ಪಾಠ್ಯ ಶಿಕ್ಷಣವನ್ನೇ ಅಲ್ಲದೆ ಸಂಸ್ಕಾರಯುತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು. "ಶಿಕ್ಷಣ ಮತ್ತು ತಾಂತ್ರಿಕ ಜ್ಞಾನ ಮಾತ್ರ ಸಾಕಾಗುವುದಿಲ್ಲ, ಸಂಸ್ಕಾರ ಇದ್ದಾಗಲೇ ವ್ಯಕ್ತಿತ್ವ ಸಂಪೂರ್ಣವಾಗುತ್ತದೆ. ಎಷ್ಟೇ ಯಶಸ್ಸು ಗಳಿಸಿದರೂ ತಂದೆ-ತಾಯಿಗಳನ್ನು ಮರೆಯಬಾರದು, ಬಂಧು-ಮಿತ್ರರನ್ನು ದೂರವಿರಿಸಬಾರದು. ಇಲ್ಲದಿದ್ದರೆ ಸಾಧನೆ ವ್ಯರ್ಥವಾಗುತ್ತದೆ" ಎಂದು ಅವರು ಹಿತವಚನ ಹೇಳಿದರು.

# ಅಕ್ಕಮಹಾದೇವಿ ಜಯಂತ್ಯುತ್ಸವ ಸಂಭ್ರಮ

## ನಾಲ್ಕು ದಿನಗಳ ವೈಭವದ ಆಚರಣೆ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಅಕ್ಕನ ಬಳಗದಲ್ಲಿ ಅಕ್ಕಮಹಾದೇವಿ ಜಯಂತ್ಯುತ್ಸವವನ್ನು ನಾಲ್ಕು ದಿನಗಳ ಕಾಲ ಭಕ್ತಿ, ಸಂಸ್ಕೃತಿ ಮತ್ತು ವೈಚಾರಿಕ ಚಿಂತನೆಗಳೊಂದಿಗೆ ಅತ್ಯಂತ ವೈಭವದಿಂದ ಆಚರಿಸಲಾಯಿತು.



ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳ ಮೂಲಕ ಅಕ್ಕನ ತತ್ವ ಮತ್ತು ಆದರ್ಶಗಳನ್ನು ಸ್ಮರಿಸಲಾಯಿತು.

ಜಯಂತ್ಯುತ್ಸವಕ್ಕೆ ಜ.ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ಅವರು ಅಕ್ಕಮಹಾದೇವಿಯವರ ವೈಚಾರಿಕ ಕ್ರಾಂತಿ, ಮಹಿಳಾ ಸಾಹಿತ್ಯ ಮತ್ತು ವಚನ ಸಾಹಿತ್ಯಕ್ಕೆ ನೀಡಿದ ಮಹತ್ವದ ಕೊಡುಗೆಗಳ ಕುರಿತು ಮಾತನಾಡಿದರು.

ಕಾರ್ಯಕ್ರಮಕ್ಕೆ ಜಯಶ್ರೀ ಉಮೇಶ ಹುಬ್ಬಳ್ಳಿ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯನ್ನು ಸುವರ್ಣಾ ಹೊಸಂಗಡಿ ನೆರವೇರಿಸಿದ್ದು, ನಾಗರತ್ನಾ ಮಾರನಬಸರಿ ಭಕ್ತಿ ಸೇವೆ ಸಲ್ಲಿಸಿದರು. ಶಾರದಾ ಎಸ್. ಹಿರೇಮಠ ಕಾರ್ಯಕ್ರಮವನ್ನು ನಿರೂಪಿಸಿದರು.

ಎರಡನೇ ದಿನದ ಕಾರ್ಯಕ್ರಮದಲ್ಲಿ ಮುಂಡರಗಿಯ ಲೇಖಕಿ ಹಾಗೂ ಸಂಘಟಕಿ ವೀಣಾ ಎಂ. ಪಾಟೀಲ ಮುಖ್ಯ ಅತಿಥಿಯಾಗಿ ಭಾಗವಹಿಸಿ, ವೈರಾಗ್ಯ ನಿಧಿ ಅಕ್ಕಮಹಾದೇವಿಯ ಜೀವನ ಮತ್ತು ಅವರ ವೈಚಾರಿಕ ನಿಲುವುಗಳ ಕುರಿತು ವಿವರವಾದ ಉಪನ್ಯಾಸ ನೀಡಿದರು.

ಅಕ್ಕಮಹಾದೇವಿಯ ಕಲ್ಯಾಣ ಕ್ರಾಂತಿ ಮತ್ತು ಅವರ ಚಿಂತನೆಗಳ ಆಳವನ್ನು ವಿಶ್ಲೇಷಿಸಿದ ಈ ಕಾರ್ಯಕ್ರಮದಲ್ಲಿ ಶರಣರ ವಚನ ಕಂಠಪಾಠ ಸ್ಪರ್ಧೆಗಳು ವಿಶೇಷ ಆಕರ್ಷಣೆಯಾಗಿದ್ದವು. ಕಾರ್ಯಕ್ರಮಕ್ಕೆ ಜಯಶ್ರೀ ಉಮೇಶ ಹುಬ್ಬಳ್ಳಿ ಅಧ್ಯಕ್ಷತೆ ವಹಿಸಿದ್ದು, ನಾಗರತ್ನಾ ಜೆ. ಹುಬ್ಬಳ್ಳಿಮಠ ಪ್ರಾರ್ಥಿಸಿದರು.

ಮೂರನೇ ದಿನ ಡಾ. ನಿಂಗು ಸೊಲಗಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ನವ ಸಂಸ್ಕೃತಿಯ ಯುಗದಲ್ಲಿ ಸ್ತ್ರೀಯರ ಪಾತ್ರದ ಕುರಿತು ವಿಚಾರಪ್ರೇರಕ ಉಪನ್ಯಾಸ ನೀಡಿದರು. ಈ ದಿನ ನಗುವಿನ ಮತ್ತು ಮನರಂಜನೆಯ ಸ್ಪರ್ಧೆಗಳು, "ಥಟ್ ಅಂತ ಹೇಳಿ" ಕಾರ್ಯಕ್ರಮಗಳು ನಡೆದವು. ಸದಸ್ಯೆಯರು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಅಂತಿಮ ದಿನ ಅಕ್ಕನ ತೊಟ್ಟಿಲು ಕಾರ್ಯಕ್ರಮ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಸಂಪ್ರದಾಯವನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು. ಸುಮಾರು ನೂರು ಮುತ್ತೈದೆಯರಿಗೆ ಉಡಿ ತುಂಬುವ ಮೂಲಕ ಸಂಪ್ರದಾಯವನ್ನು ಆಚರಿಸಲಾಯಿತು.

ಈ ನಾಲ್ಕು ದಿನಗಳ ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷರಾದ ಕಸ್ತೂರಿ ಹಿರೇಗೌಡ್ರ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು ಹಾಗೂ ಅಕ್ಕನ ಬಳಗದ ಸದಸ್ಯೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು ಎಂದು ಕಾರ್ಯದರ್ಶಿ ಜಯಶ್ರೀ ತಾತನಗೌಡ ಪಾಟೀಲ ತಿಳಿಸಿದ್ದಾರೆ.

# ಎ. 7ರಂದು ನೇರ ಸಂದರ್ಶನ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಗದಗ ವತಿಯಿಂದ ಎಪ್ರಿಲ್ 7ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಗದಗ ನಗರದ ಮುಂಡರಗಿ ರಸ್ತೆಯ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜು ಎದುರಿನಲ್ಲಿರುವ ಅನ್ನಪೂರ್ಣ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ಕಚೇರಿಯಲ್ಲಿ ಈ ಸಂದರ್ಶನ ನಡೆಯಲಿದೆ.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಹಾಗೂ ಯಾವುದೇ ಪದವಿ ಪಡೆದ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ಎಕ್ಸಿಕ್ಯೂಟಿವ್, ಸಿನಿಯರ್ ಎಕ್ಸಿಕ್ಯೂಟಿವ್ ಹಾಗೂ ಅಸಿಸ್ಟಂಟ್ ಬ್ರಾಂಚ್ ಮ್ಯಾನೇಜರ್ ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ. ವಯೋಮಿತಿ 18 ರಿಂದ 32 ವರ್ಷವಾಗಿದ್ದು, ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ಗದಗ, ಹುಬ್ಬಳ್ಳಿ, ಗಂಗಾವತಿ ಹಾಗೂ ಕೊಪ್ಪಳ ಸ್ಥಳಗಳಲ್ಲಿ ಉದ್ಯೋಗ ಅವಕಾಶ ಕಲ್ಪಿಸಲಾಗುತ್ತದೆ.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಅಂಕಪಟ್ಟಿಗಳ ಝೆರಾಕ್ಸ್ ಪ್ರತಿಗಳು, ಎರಡು ಬಯೋಡಾಟಾ ಪ್ರತಿಗಳು ಹಾಗೂ ಆಧಾರ್ ಕಾರ್ಡ್ ಝೆರಾಕ್ಸ್ ಜೊತೆಗೆ ಹಾಜರಾಗಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ನೋಂದಣಿ ಕಡ್ಡಾಯವಾಗಿದ್ದು, ಅದನ್ನು ಸಂದರ್ಶನದ ದಿನವೇ ಮಾಡಿಸಬೇಕು.

ಯುವನಿಧಿ ಯೋಜನೆಯ ಫಲಾನುಭವಿಗಳು ಕಡ್ಡಾಯವಾಗಿ ಭಾಗವಹಿಸುವಂತೆ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 6363330688, 9901748668, 8093077441 ದೂರವಾಣಿ ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಬಸವಂತ ಪಿ.ಎನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬನ್ನಿಗೋಳ ಜಾತ್ರಾ ಮಹೋತ್ಸವದಲ್ಲಿ ಜೀವನ ಮೌಲ್ಯಗಳ ಕುರಿತು ಶ್ರೀಗಳ ಸಂದೇಶ

# ಅನ್ನ, ಆಶ್ರಯಕ್ಕಿಂತ 'ಅರಿವು' ಮುಖ್ಯ

**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ತಂಬ್ರಹಳ್ಳಿ ಸಮೀಪದ ಬನ್ನಿಗೋಳ ಗ್ರಾಮದಲ್ಲಿ ಹನುಮ ಜಯಂತಿ ಅಂಗವಾಗಿ ನಡೆದ ರಥೋತ್ಸವ ಹಾಗೂ ಧಾರ್ಮಿಕ ಸಭೆಯಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಜೀವನ ಮೌಲ್ಯಗಳ ಕುರಿತು ಮಾರ್ಮಿಕ ಸಂದೇಶ ನೀಡಿದರು.

"ಮನುಷ್ಯನು ಬದುಕಲು ಅನ್ನ, ಆಶ್ರಯ ಹಾಗೂ ಅರಿವೆ (ಬಟ್ಟೆ) ಮುಖ್ಯವಾದರೂ, ಅವಕ್ಕಿಂತಲೂ 'ಅರಿವು' (ಜ್ಞಾನ) ಅತ್ಯಂತ ಮುಖ್ಯವಾಗಿದೆ" ಎಂದು ಅವರು ಅಭಿಪ್ರಾಯಪಟ್ಟರು.

ಜೀವನದಲ್ಲಿ ಜ್ಞಾನವೇ ದಾರಿದೀಪವಾಗಿದ್ದು, ಅದು ವ್ಯಕ್ತಿಯನ್ನು ಸಮೃದ್ಧ ಜೀವನದತ್ತ ಕೊಂಡೊಯ್ಯುತ್ತದೆ ಎಂದರು.

ಮನೆಯ ಉದಾಹರಣೆಯನ್ನು ನೀಡಿ, "ದೊಡ್ಡ ಮನೆ ಇದ್ದರೆ ಸಾಕಾಗುವುದಿಲ್ಲ, ಅದನ್ನು



ಬೆಳಗಲು ಒಂದು ದೀಪ ಸಾಕು. ಹಾಗೆಯೇ ಮನಸ್ಸಿನಲ್ಲಿರುವ ಕೆಟ್ಟ ಆಲೋಚನೆಗಳನ್ನು ದೂರ ಮಾಡಿ, ಒಳ್ಳೆಯ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು" ಎಂದು ಸಲಹೆ ನೀಡಿದರು.

ಮೋಳಿಗೆ ಮಾರಯ್ಯನವರ ವಚನವನ್ನು ಉಲ್ಲೇಖಿಸಿದ ಅವರು, "ಎಷ್ಟೇ ಸಂಪತ್ತು ಗಳಿಸಿದರೂ ಮನುಷ್ಯನಿಗೆ ಅಗತ್ಯವಿರುವುದು ಅಲ್ಪವೇ. ಮನಸ್ಸಿಗೆ ಶಾಂತಿ ಇಲ್ಲದಿದ್ದರೆ ಬದುಕು ವ್ಯರ್ಥ" ಎಂದು ಹೇಳಿದರು.

"ಪಂಚಭೂತಗಳಿಂದ ನಿರ್ಮಿತವಾದ ಈ ದೇಹ ಮಣ್ಣಾಗುತ್ತದೆ. ಸಾಯುವಾಗ ಸಂಪತ್ತು ಯಾವುದೂ ಜೊತೆ ಬರದು, ಮಾಡಿದ ಪುಣ್ಯ ಕಾರ್ಯಗಳೇ ನಮ್ಮೊಂದಿಗೆ ಬರುತ್ತವೆ. ಜಗತ್ತು ಪ್ರತಿಧ್ವನಿಯಂತೆ – ನಾವು ಏನು ಕೊಡುತ್ತೇವೋ

> "ಸಂಪತ್ತು ಅಲ್ಲ, ಜ್ಞಾನವೇ ಮನುಷ್ಯನ ಬದುಕಿಗೆ ನಿಜವಾದ ದಾರಿದೀಪ."
> **– ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು.**

ಅದೇ ಮರಳಿ ನಮಗೆ ಸಿಗುತ್ತದೆ" ಎಂದು ಗವಿ ಶ್ರೀಗಳು ತಿಳಿಸಿದರು.

ಮಕ್ಕಳಿಗೆ ಕೇವಲ ಆಸ್ತಿ ಮಾಡಿಡುವುದಕ್ಕಿಂತ, ಅದನ್ನು ಹೇಗೆ ಸದ್ವಿನಿಯೋಗ ಮಾಡಬೇಕು ಎಂಬ ಅರಿವು ನೀಡುವುದು ಮುಖ್ಯ. ದೇವರಿಗೆ ಬಂಗಾರದ ಕಾಣಿಕೆ ನೀಡುವುದಕ್ಕಿಂತ ಭಕ್ತಿಯಿಂದ ಸೇವೆ ಸಲ್ಲಿಸುವುದು ಶ್ರೇಷ್ಠ ಎಂದರು.

ಬನ್ನಿಗೋಳ ಗ್ರಾಮದ ಭಕ್ತಿಭಾವವನ್ನು ಶ್ಲಾಘಿಸಿದ ಅವರು, "ತುಂಗಭದ್ರೆಯ ನೀರು ಬತ್ತಬಹುದು, ಆದರೆ ಇಲ್ಲಿನ ಜನರ ಭಕ್ತಿ ಎಂದಿಗೂ ಬತ್ತುವುದಿಲ್ಲ" ಎಂದು ಭಾವುಕರಾಗಿ ನುಡಿದರು.

ಕಾರ್ಯಕ್ರಮದಲ್ಲಿ ನಂದಿಪುರದ ಶ್ರೀ ಡಾ. ಮಹೇಶ್ವರ ಸ್ವಾಮಿಗಳು, ಹಂಪಸಾಗರದ ಶ್ರೀ ಅಭಿನವ ಶಿವಲಿಂಗ ರುದ್ರಮುನಿ ಸ್ವಾಮಿಗಳು ಹಾಗೂ ಕಡಲಬಾಳು ಶಾಖಾ ಗವಿಮಠದ ಶ್ರೀ ಮರಿ ಶಾಂತವೀರ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು.

ಗ್ರಾಮದ ಹಿರಿಯರಾದ ಮೂಲಿಮನಿ ರವಿಪ್ರಸಾದ್, ಹ್ಯಾಟಿ ಆನಂದ್ ರೆಡ್ಡಿ, ಮೈನಹಳ್ಳಿ ಕೊಟ್ರೇಶಪ್ಪ, ಮಡಿವಾಳರ ಹನುಮಂತಪ್ಪ, ಗಡಿಗಿ ಅನಾಳೆಪ್ಪ, ಬಸವರೆಡ್ಡಿ, ನವಲಿ ದೇವಪ್ಪ, ಅಂಬಿಗರ ಮೌನೇಶ್ ಸಿದ್ದಪ್ಪ, ಹಲಿಗೇರಿ ಕೊಟ್ರೇಶ್, ಎನ್. ಸುರೇಶ್ ಸೇರಿದಂತೆ ಸಾವಿರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

ಗುಡ್ಡದ ಮೋಹನ್ ರೆಡ್ಡಿ ಸ್ವಾಗತಿಸಿದರು. ನಿವೃತ್ತ ಮುಖ್ಯಗುರು ಹುಗ್ಗಿ ಕೊಟ್ರೇಶ್ ಪ್ರಾರ್ಥಿಸಿದರು. ಡಾ. ಅಂಜನಪ್ಪ ಗಡಾದ, ಎಂ. ಬಸವರಾಜ್ ಹಾಗೂ ಎಂ. ಪಾರ್ಥ ಕಾರ್ಯಕ್ರಮ ನಿರ್ವಹಿಸಿದರು.

# ಸಿದ್ದಲಿಂಗ ನಗರ ಸರ್ಕಾರಿ ಪ್ರೌಢಶಾಲೆ: ಪ್ರವೇಶ ಕರಪತ್ರ ಬಿಡುಗಡೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರದ ಸಿದ್ದಲಿಂಗ ನಗರದಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ 2026–27ನೇ ಸಾಲಿನ ಪ್ರವೇಶಕ್ಕಾಗಿ ಸವಿಸ್ತಾರ ಮಾಹಿತಿಯ ಕರಪತ್ರವನ್ನು ಬಿಡುಗಡೆ ಮಾಡುವ ಕಾರ್ಯಕ್ರಮ ನಡೆಯಿತು.

ಸಭಾಪತಿ ಬಸವರಾಜ ಹೊರಟ್ಟಿ ದಂಪತಿಗಳ ದತ್ತು ಯೋಜನೆಯಡಿ ಅಭಿವೃದ್ಧಿಗೊಂಡಿರುವ ಈ ಶಾಲೆಯ ಕರಪತ್ರವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್. ಎಸ್. ಬುರಡಿ ಹಾಗೂ ಶಾಲಾ ದತ್ತು ಉಸ್ತುವಾರಿ ಡಾ. ಬಸವರಾಜ ಧಾರವಾಡ ಅವರ ನೇತೃತ್ವದಲ್ಲಿ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಉಪನಿರ್ದೇಶಕ ಆರ್. ಎಸ್. ಬುರಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಈ ಶಾಲೆ ಜಿಲ್ಲೆಯಲ್ಲಿ ಪ್ರತಿಷ್ಠಿತ ಸಂಸ್ಥೆಯಾಗಿ ರೂಪುಗೊಂಡಿದ್ದು, ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದೆ ಎಂದು ಹೇಳಿದರು. ಪ್ರತಿವರ್ಷ ತಾಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ನೀಡುತ್ತಿರುವ ಈ ಶಾಲೆ, ಕಳೆದ ಕೆಲವು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಟಾಪರ್ ವಿದ್ಯಾರ್ಥಿಗಳನ್ನು ನೀಡಿದ್ದು, ಐವರು ವಿದ್ಯಾರ್ಥಿನಿಯರು ಸರ್ಕಾರದ ಲ್ಯಾಪ್ ಟಾಪ್ ಹಾಗೂ 50,000 ನಗದು ಬಹುಮಾನ ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ತಿಳಿಸಿದರು.

ಶಾಲಾ ದತ್ತು ಉಸ್ತುವಾರಿ ಡಾ. ಬಸವರಾಜ ಧಾರವಾಡ ಮಾತನಾಡಿ, ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಜನಪ್ರತಿನಿಧಿಗಳ ಸಹಕಾರದಿಂದ ಶಾಲೆಗೆ ಎಲ್ಲಾ ಅಗತ್ಯ ಸೌಕರ್ಯಗಳನ್ನು ಒದಗಿಸಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲಾಗಿದೆ ಎಂದು ಹೇಳಿದರು. ಗುಣಮಟ್ಟದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ವಿಶೇಷ ಗಮನ ನೀಡಲಾಗುತ್ತಿದೆ. ಖಾಸಗಿ ಶಾಲೆಗಳ ಮಟ್ಟಕ್ಕಿಂತ ಕಡಿಮೆಯಿಲ್ಲದ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತಿದ್ದು, ಸಾರ್ವಜನಿಕರು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ್ ಅಕ್ಷರ ದಾಸೋಹ ಅಧಿಕಾರಿ ಶಂಕರ್ ಹಡಗಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಎಪಿಸಿವೈ. ಶಿವಕುಮಾರ್ ಕುರಿ, ಈಶ್ವರಪ್ಪ ಮಡಿವಾಳರ, ಎಸ್.ಸಿ. ಹಿರೇಮಠ, ಪ್ರಭಾರಿ ಮುಖ್ಯೋಪಾಧ್ಯಾಯಿನಿ ಜಯಲಕ್ಷ್ಮಿ ಅಣ್ಣಿಗೇರಿ ಸೇರಿದಂತೆ ಇಲಾಖೆಯ ಅಧಿಕಾರಿಗಳು ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

# ಎ. 10ರಂದು ಲೋಕಾಯುಕ್ತ ಜನಸಂಪರ್ಕ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅವರ ನಿರ್ದೇಶನದಂತೆ, ಕರ್ನಾಟಕ ಲೋಕಾಯುಕ್ತ ಗದಗ ಕಚೇರಿಯ ಪೊಲೀಸ್ ಅಧಿಕಾರಿಗಳು ಎಪ್ರಿಲ್ 10ರಂದು ಶಿರಹಟ್ಟಿಯಲ್ಲಿ ಜನಸಂಪರ್ಕ ಸಭೆಯನ್ನು ಆಯೋಜಿಸಿದ್ದಾರೆ.

ಈ ಸಭೆ ತಹಸೀಲ್ದಾರ್ ಕಾರ್ಯಾಲಯದಲ್ಲಿ ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ಸಭೆಯಲ್ಲಿ ಸಾರ್ವಜನಿಕರಿಂದ ದೂರುಗಳು ಹಾಗೂ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರ ಕ್ರಮ ಕೈಗೊಳ್ಳಲಾಗುತ್ತದೆ.

ಸಾರ್ವಜನಿಕರು ತಮ್ಮ ಸಮಸ್ಯೆಗಳು, ದೂರುಗಳು ಹಾಗೂ ಅಹವಾಲುಗಳನ್ನು ನೇರವಾಗಿ ಲೋಕಾಯುಕ್ತ ಅಧಿಕಾರಿಗಳಿಗೆ ಸಲ್ಲಿಸುವ ಅವಕಾಶ ಇದಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ.

# ಬಹುಮಾನಕ್ಕೆ ಕೃತಿಗಳ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ವಿವಿಧ ಸಾಹಿತ್ಯ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು, ಪ್ರಕಾಶಕರು ಹಾಗೂ ಸಾಹಿತ್ಯಾಸಕ್ತರು ತಮ್ಮ ಕೃತಿಗಳ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು–560002 ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ, ಕೂರಿಯರ್ ಅಥವಾ ಖುದ್ದಾಗಿ ಜೂನ್ 30, 2026ರೊಳಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡುವಂತೆ ತಿಳಿಸಲಾಗಿದೆ.

# ಸ್ವ–ಉದ್ಯಮದತ್ತ ಗ್ರಾಮವನ್ನು ಮಾದರಿಯಾಗಿಸಿ

▶▶ ಮೊದಲನೇ ಪುಟದಿಂದ

ಗ್ರಾಮವನ್ನು ಉದ್ಯಮಶೀಲತೆಯಲ್ಲಿ ಮಾದರಿಯನ್ನಾಗಿಸಬೇಕು ಎಂದು ಅವರು ಕರೆ ನೀಡಿದರು.

ದ್ವಾರಕಾಮಾಯಿ ಫೌಂಡೇಶನಿನ ಸಂಸ್ಥಾಪಕ ವಿನಾಯಕ್ ಆರ್, ಸೆರೆಂಟಿಕಾ ಕಂಪನಿಯ ಗದಗ ಶಾಖೆಯ ವ್ಯವಸ್ಥಾಪಕ ಎನ್. ಮೂರ್ತಿ ಹಾಗೂ ಗಂಗಣ್ಣ ಕತ್ತಿ ಮಾತನಾಡಿ, ಕಾರ್ಯಾಗಾರದ ಉದ್ದೇಶ ಮಹಿಳಾ ಸಬಲೀಕರಣವಾಗಿದ್ದು, ಮಹಿಳೆಯರು ತಮ್ಮ ಕುಟುಂಬ ಮತ್ತು ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಒಟ್ಟು 37 ಮಹಿಳೆಯರು ಭಾಗವಹಿಸಿದ್ದು, ಆಯೋಜಕರಾದ ಸೆರೆಂಟಿಕಾ ರಿನಿವೆಬಲ್ಸ್ ಕಂಪನಿ, ದ್ವಾರಕಾಮಾಯಿ ಫೌಂಡೇಶನ್ ಮತ್ತು ಸಿ.ಬಿ. ಬಡ್ನಿ ಪ್ರತಿಷ್ಠಾನ, ಮುಳಗುಂದ ಅವರಿಗೆ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ಪಾಲ್ಗೊಂಡ ಎಲ್ಲ ಮಹಿಳೆಯರಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀಮತಿ ಕವಿತಾ ಬಾಲರೆಡ್ಡಿ, ಸ್ವಯಂಸೇವಕರಾದ ಈರಣ್ಣ ಕಂಬಳಿ, ಗಣೇಶ ಚವಡಿ, ಈರಣ್ಣ ಗಾಣಿಗೇರ, ಶ್ರೀಮತಿ ಈರಮ್ಮ ತಿಪ್ಪಾ ಸೇರಿದಂತೆ ಗ್ರಾಮದ ನಿವಾಸಿಗಳು ಉಪಸ್ಥಿತರಿದ್ದರು.

# ದಶಕಗಳ ಹೋರಾಟಕ್ಕೆ ಫಲ!

▶▶ ಮೊದಲನೇ ಪುಟದಿಂದ

ಬಂದಿದೆ.

ರೈಲ್ವೆ ಮೇಲ್ಸೇತುವೆ ಮತ್ತು ಅಂಡರ್ ಪಾಸ್ ನಿರ್ಮಾಣವು ದೀರ್ಘಕಾಲದ ಬೇಡಿಕೆಯಾಗಿತ್ತು. ಈ ಹೋರಾಟಕ್ಕೆ ಸಹಕರಿಸಿದ ಸಂಸದರಾದ ಈ ತುಕಾರಾಂ, ಮಾಜಿ ಸಂಸದರಾದ ದೇವೇಂದ್ರಪ್ಪ, ಶಾಸಕರಾದ ಕೆ. ನೇಮಿರಾಜ ನಾಯ್ಕ, ಮಾಜಿ ಶಾಸಕರಾದ ಎಸ್. ಭೀಮನಾಯ್ಕ ಸೇರಿದಂತೆ ಸಂಘಟನೆಗಳು ಹಾಗೂ ಸಾರ್ವಜನಿಕರಿಗೆ ಕೃತಜ್ಞತೆಗಳು. ಮುಂದಿನ ಹಂತದಲ್ಲಿ ರೈಲ್ವೆ ನಿಲ್ದಾಣ




ಮೇಲ್ದರ್ಜೆಗೆ ಏರಿಸುವ ಹೋರಾಟ ಮುಂದುವರಿಯಲಿದೆ ಎಂದು ರೈಲ್ವೆ ಹೋರಾಟ ಸಮಿತಿ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್ ತಿಳಿಸಿದ್ದಾರೆ.

### ವೀರಾಂಜನೇಯ ದೇವಸ್ಥಾನದಲ್ಲಿ ಹನುಮ ಜಯಂತಿ ಸಂಭ್ರಮದಲ್ಲಿ ಸಿದ್ದು ಪಾಟೀಲ

# ವೀರಾಂಜನೇಯಸ್ವಾಮಿ ಶಕ್ತಿ–ಸೇವೆಯ ಅವತಾರ



**■ವಿಜಯಸಾಕ್ಷಿ ಸುದ್ದಿ, ಗದಗ**

ಶ್ರೀರಾಮನ ಭಕ್ತನಾದ ವೀರಾಂಜನೇಯ ಸ್ವಾಮಿ ಶಕ್ತಿ ಮತ್ತು ಸೇವೆಯ ಅವತಾರವಾಗಿದ್ದಾನೆ. ಈತನನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿ ನಡೆದುಕೊಳ್ಳುವ ಭಕ್ತಾಧಿಗಳಿಗೆ ಆಂಜನೇಯ ಸ್ವಾಮಿ ಒಳಿತನ್ನು ಮಾಡುತ್ತಾನೆ ಎಂಬ ನಂಬಿಕೆ ಇದೆ ಎಂದು ಗದಗ ಜಿ.ಪಂ ಮಾಜಿ ಅಧ್ಯಕ್ಷ, ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಿದ್ದು ಪಾಟೀಲ ಹೇಳಿದರು.

ಹಾತಲಗೇರಿ ರೋಡಿನ ವಿವೇಕಾನಂದ ನಗರದ ಶ್ರೀ ವೀರಾಂಜನೇಯ ದೇವಸ್ಥಾನ ಸೇವಾ ಸಮಿತಿಯಿಂದ ಏರ್ಪಡಿಸಿದ್ದ ಹನುಮ ಜಯಂತಿ, ವೀರಾಂಜನೇಯ ದೇವಸ್ಥಾನದ 16ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಹನುಮ ಜಯಂತಿ ದಿನ ಹನುಮಂತನ ಪೂಜೆಯಿಂದ ತೊಂದರೆಗಳು ದೂರವಾಗುತ್ತವೆ. ಶಕ್ತಿ, ಭಕ್ತಿ ಮತ್ತು ಆರೋಗ್ಯ ದೊರೆಯುತ್ತದೆ ಎಂಬ ನಂಬಿಕೆ ಇದೆ. ಶ್ರೀರಾಮನ ಭಕ್ತನಾಗಿ ಹನುಮಂತನ ಭಕ್ತಿ ಮತ್ತು ಬಲವನ್ನು ಈ ದಿನ ಸ್ಮರಿಸಲಾಗುತ್ತಿದೆ.

ಈ ದೇವಸ್ಥಾನದ ಕಂಪೌಂಡ್ ಅಪೂರ್ಣಗೊಂಡಿದ್ದು ಜಿಲ್ಲಾ ಉಸ್ತುವಾರಿ ಸಚಿವರ ಗಮನ ಸೆಳೆದು ಕಂಪೌಂಡ್ ನಿರ್ಮಾಣ ಪೂರ್ಣಗೊಳಿಸುವ ಭರವಸೆ ನೀಡಿದರು.

> "ವೀರಾಂಜನೇಯ ದೇವಸ್ಥಾನದ ಬಳಿ ಭಕ್ತಾಧಿಗಳ ಅನುಕೂಲಕ್ಕಾಗಿ ಹೈಮಾಸ್ಟ್ ಬೀದಿ ದೀಪದ ವ್ಯವಸ್ಥೆ ಮಾಡಬೇಕೆಂದು ಈ ಭಾಗದ ಸಾರ್ವಜನಿಕರ ಬೇಡಿಕೆಯಾಗಿದೆ. ಆದಷ್ಟು ಬೇಗ ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಈ ಕಾರ್ಯವನ್ನು ಕೈಗೊಳ್ಳಲಾಗುವುದು"–
> **– ಬಿ.ಎನ್.ಯರನಾಳ,**
> ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯ ಬಿ.ಎನ್.ಯರನಾಳ, 16ನೇ ವರ್ಷದ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ದೇವಸ್ಥಾನ ಈ ಭಾಗದ ಆರಾಧ್ಯ ವೀರಾಂಜನೇಯ ಸ್ವಾಮಿಯಾಗಿದ್ದು ಇಲ್ಲಿನ ಪ್ರಜ್ಞಾವಂತ ಭಕ್ತಾಧಿಗಳು ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುವ ಮೂಲಕ ದೇವಸ್ಥಾನದ ಪ್ರಾಂಗಣವನ್ನು ಅತ್ಯಂತ ಚೊಕ್ಕಟವಾಗಿ ಇಟ್ಟಿದ್ದಾರೆ ಎಂದರು.

ಸಮಾರಂಭದಲ್ಲಿ ಸಿದ್ದು ಪಾಟೀಲ, ಸತೀಶ ಮುದಗಲ್ಲ, ಶಂಕರ ಹಾನಗಲ್ಲ, ರಾಮಣ್ಣ ಕಾಶಪ್ಪನವರ ದಂಪತಿ ಸೇರಿದಂತೆ ದಾನಿಗಳಾದ ಮಂಜುನಾಥ ನಾಯಕ, ಸಿ.ಎಂ.ಪಾಟೀಲ, ಕಳಕಯ್ಯ ಹಿರೇಮಠ, ನಜೀರ್ ಕಿಲ್ಲೇದಾರ, ಸಿ.ಎನ್.ಹಿರೇಮಠ, ಮೇಘರಾಜ ಪೂಜಾರ, ದೇವೇಂದ್ರಪ್ಪ ಹೂಲಿ, ಕುಮಾರ ಶೆಟ್ರ, ಜಗದೀಶಚಂದ್ರ ನಾಡಗೌಡ್ರ, ರಾಮಣ್ಣ ಮುನವಳ್ಳಿ, ಬಿ.ಎಲ್.ಪಾಟೀಲ, ಸುದರ್ಶನ ಹಾನಗಲ್ಲ, ಜಿ.ಟಿ.ಹಿಡ್ಕಿಮಠ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

# ವಿಘ್ನೇಶ್ವರ ಸಮಿತಿಯಿಂದ ಆಂಜನೇಯ ಸ್ವಾಮಿ ಜಯಂತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಮಕ್ಕಳಿಗೆ ಕೇವಲ ಅಕ್ಷರ ಶಿಕ್ಷಣ ಸಾಕಾಗುವುದಿಲ್ಲ, ಅದರ ಜೊತೆಗೆ ನೈತಿಕ ಶಿಕ್ಷಣ ಮತ್ತು ವಾಸ್ತವಿಕ ಬದುಕಿನ ಅರಿವು ಅತ್ಯಗತ್ಯ ಎಂದು ಬೆಳ್ಳಟ್ಟಿ–ಕೊಕ್ಕರಗುಂದಿ–ನೀರಲಗಿಯ ಶ್ರೀ ರಾಮಲಿಂಗೇಶ್ವರ ದಾಸೋಹ ಮಠದ ಪೂಜ್ಯ ಬಸವರಾಜ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ನಗರದ ಕಳಸಾಪೂರ ರಸ್ತೆಯ ವಿಶ್ವೇಶ್ವರಯ್ಯ ನಗರದಲ್ಲಿ ವಿಘ್ನೇಶ್ವರ ಸೇವಾ ಸಮಿತಿಯು ಆಯೋಜಿಸಿದ್ದ ಆಂಜನೇಯ ಸ್ವಾಮಿ ಜಯಂತ್ಯುತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಇಂದಿನ ಮಕ್ಕಳು ಮೊಬೈಲ್, ಕಂಪ್ಯೂಟರ್ ಮತ್ತು ಇಂಟರ್‌ನೆಟ್‌ನಲ್ಲಿ ಹೆಚ್ಚು ಸಮಯ ಕಳೆಯುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಸುತ್ತಮುತ್ತಲಿನ ಬದುಕಿನ ವಾಸ್ತವಿಕತೆ, ಮಾನವೀಯ ಸಂಬಂಧಗಳ ಮಹತ್ವ ತಿಳಿಸಬೇಕು ಎಂದು ಹೇಳಿದರು.

ಮಕ್ಕಳು ಕೇವಲ ಗೂಗಲ್ ಮತ್ತು ವಿಕಿಪೀಡಿಯ ಮೇಲೆ ಅವಲಂಬಿತರಾಗಿ ಬದುಕುವುದಕ್ಕಿಂತ, ಸ್ವಅನುಭವ ಮತ್ತು ನೈಜ ಜೀವನದ ಜ್ಞಾನವನ್ನು ಗಳಿಸಬೇಕು. ಮನೆಯ ಕೆಲಸಗಳಲ್ಲಿ ಪಾಲ್ಗೊಳ್ಳುವುದು, ಕೃಷಿ ಪರಿಕರಗಳ ಪರಿಚಯ, ಕುಟುಂಬದ ಜವಾಬ್ದಾರಿಗಳ ಅರಿವು ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವೆಂದು ಹೇಳಿದರು.

ಹೈಟೆಕ್ ಯುಗದಲ್ಲಿ ಕುಟುಂಬ ಮತ್ತು ಸಂಬಂಧಗಳ ಮಹತ್ವವನ್ನು ತಿಳಿಸುವುದು ಅತ್ಯಂತ ಮುಖ್ಯ. ಮಕ್ಕಳನ್ನು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಅವರಲ್ಲಿ ಉತ್ತಮ ಮೌಲ್ಯಗಳು ಬೆಳೆಯುತ್ತವೆ. ಹನುಮ ಜಯಂತಿ ನೆಪದಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಶ್ಲಾಘನೀಯವಾಗಿದೆ. ಇವು ಮಕ್ಕಳ ಪ್ರತಿಭೆಯನ್ನು ಹೊರಹೊಮ್ಮಿಸಲು ಉತ್ತಮ ವೇದಿಕೆಗಳಾಗಿವೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗದಗ–ಬೆಟಗೇರಿ ನಗರಸಭೆಯ ಪೌರಾಯುಕ್ತ ರಾಜಾರಾಮ ಪವಾರ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಮಾತನಾಡಿ, ವಿಘ್ನೇಶ್ವರ ಸೇವಾ ಸಮಿತಿಯು ಧಾರ್ಮಿಕ, ಸಾಮಾಜಿಕ ಹಾಗೂ ವೈಚಾರಿಕ ಕಾರ್ಯಗಳಲ್ಲಿ ಕ್ರಿಯಾಶೀಲವಾಗಿದೆ ಎಂದು ಶ್ಲಾಘಿಸಿದರು. ಸಮಿತಿಯ ಬೇಡಿಕೆಯಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷ ರವೀಂದ್ರರಡ್ಡಿ ಫ. ಇನಾಮತಿ, ಭಕ್ತರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ತಿಳಿಸಿ, ಎಲ್ಲರೂ ಸಂಘಟಿತರಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿ ನಿವೃತ್ತ ಶಿಕ್ಷಕ ಬಿ.ಎಸ್. ಬೆಂತೂರ, ಕಾರ್ಯದರ್ಶಿ ಪ್ರಕಾಶ ಬೆಂತೂರ ಹಾಗೂ ನಗರಸಭೆಯ ಎಇಇ ಲಕ್ಷ್ಮಣ್ಣ ಜೋಗದಂಡಕರ್ ಉಪಸ್ಥಿತರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka